ಮಾರನಯ್ಯನನ್ನು ಪಡೆದ ಸಾರಸಾಕ್ಷಿ ಲಕ್ಷ್ಮಿಗೀಗ॥2॥ ಸುಂದರಾಂಗನಾದ ಶಿವನ ಅಂದವನ್ನು ನೋಡಿ ನಲಿದು ಮೇದಿನೀಗೆ ಮೋದವಿತ್ತ ಶಿವನ ರಾಣಿ ಪಾರ್ವತೀಗೇ॥3॥

ದಿವ್ಯ ರತ್ನದಾರುತಿ ಮಾಡಿ ಅಂಬೆಗೆ **ರಾಗ: ಸಿಂಧುಭೈರವಿ**

ದಿವ್ಯ ರತ್ನದಾರುತಿ ಮಾಡಿ ಅಂಬೆಗೆ ಶಾರದಾಂಬೆಗೆ॥ಪ॥ ಕೊಲ್ಲಾಪುರದಿ ಮೆಲ್ಲನೆ ಬಂದು ಶಂಕ್ರಾಚಾರ್ಯರ ಹಿಂದೆ। ಹೆಜ್ಜೆಯ ಧ್ವನಿಗಳ ಕೇಳುತ ನಲಿವ ಶೃಂಗೇರಿಯಲಿ ನಿಂತೆ॥1॥ ವಜ್ರದ ಪೀಠವು ಪ್ರಜ್ವಲಿಸುತೆ ಬಾ ಮುದ್ದು ಮುಖದ ಮೂಕಾಂಬೆ। ಭಕ್ತರ ನಾಲಿಗೆ ಮೇಲೆ ನಲಿದಾಡುವ ಬ್ರಹ್ಮನ ರಾಣಿಗೀಗ॥2॥ ಮಾರನವಮಿ ನವರಾತ್ರಿಯಲಿ ವಾಹನವೇರುವಳೀಕೆ। ದಿನಕೊಂದು ಕಳೆಗಳ ತೋರುತ ನಲಿವ ಶೃಂಗೇರಿಯಲಿ ನಿಂತೆ॥3॥

ಮಂಗಳ

ಭುಜಂಗವೇಣಿ ಶಾರದೆ **ರಾಗ: ಅಭೇರಿ**

ಭುಜಂಗವೇಣಿ ಶಾರದೆ ಶುಭಾಂಗಿ ಮಂಗಳಂ। ನಿಜಾಂಗ್ರಿಭಕ್ತ ಭಾಗ್ಯದಾನಶೀಲೆ ಮಂಗಳಂ॥1॥ ಜ್ಞಾನದಾನ ಕೋವಿದೆ ಗಾನನಾಟ್ಯ ಸಂಪದೆ। ದೀನಜನಾವನ ವಿಶಾರದೆ ॥2॥ ಲೋಕಜನಪಾಲಿನೀ ನೀ ಕಲಾಪ್ರದಾಯಿನಿ ಶ್ರೀ ಕಮಲಜಪ್ರಿಯ ವಿಲಾಸಿನಿ॥3॥

ಶ್ರೀಲಕ್ಷ್ಮೀ ಸ್ತುತಿ

ದೇವರನಾಮ

ಅರವಿಂದಾಲಯೆ ತಾಯೆ **ರಾಗ: ಕಾಂಬೋಧಿ, ಏಕತಾಳ**

ಅರವಿಂದಾಲಯೆ ತಾಯೆ ಶರಣು ಹೊಕ್ಕೆನು ಕಾಯೆ। ಸಿರಿರಮಣನ ಪ್ರಿಯೆ ಜಗನ್ಮಾತೇ॥ಪ॥ ಕಮಲ ಸುಗಂಧಿಯೆ ಕಮಲದಳ ನೇತ್ರೆಯೆ। ಕಮಲ ವಿಮಲ ಶೋಭಿತೆ। ಕಮನೀಯ ಹಸ್ತಪಾದ ಕಮಲ ವಿರಾಜಿತೆ। ಕಮಲೇ ಕಾಯೇ ಎನ್ನನು॥1॥ ನಿನ್ನ ಕರುಣಕಟಾಕ್ಷವೀಕ್ಷಣದಿಂದಲಿ ತನುಮನ ಗಳನಿತ್ತೇ॥ ಧನ್ಯವಿರಾಜಿತೆ ಅಜಭವಾದಿಗಳ। ಪ್ರಸನ್ನೆ ಕಾಯೆ ಎನ್ನನು॥2॥ ಹರಿ ನಿನ್ನ ಉರದಲ್ಲಿ ಧರಿಸಿದನೆಂಬಂಥ। ಗರುವದಿ ಮರೆಯದಿರೆ। ನಿರುತ ನಿನ್ನಯ ಮುದ್ದು ಪುರಂದರ ವಿಠ್ಠಲನ ಚರಣಕಮಲವ ತೋರಿಸೆ॥3॥

ಎಂತು ಶೋಭಿಸುತಿಹಳು **ರಾಗ: ಆರಭಿ**

ಎಂತು ಶೋಭಿಸುತಿಹಳು ನೋಡೀ॥ಪ॥ ಕಂತು ಪಿತನಾ ಕಾಂತೆ ಶ್ರೀಕಾಂತನೊಡಗೂಡಿ॥ಅ.ಪ॥ ಸಿರಿಕಾಂತಾ ಚಾರ್ಯರ ಭಕುತಿಗೆ ಒಲಿಯುತ್ತ। ಹರಸಲು ಬಂದಿಹಳು ಸಿರಿದೇವಿಯೂ। ಹರಿಯನ್ನು ಕೂಡುತ್ತ ಧರೆಯಲ್ಲಿ ತಾನಿಂದು। ಮರುತ ವಂದಿತಳಾಗಿ ಮೆರೆಯುತಿಹಳೂ॥1॥ ಗಂಧವನು ತೇಯುವ ಚಂದದಾಶಿಲೆಯಲ್ಲಿ। ಸುಂದರ ರೂಪದ ಇಂದಿರೆಯು ತಾನು। ಮಂದರನು ಉದ್ಧರಿಸೆ ಮಂದರೋದ್ಧರನ ಸತಿ। ಚೆಂದಾಗಿ ಶೋಭಿಸುತ ನಿಂದಿಹಳು ಇಲ್ಲಿ॥2॥ ಎಲ್ಲ ಜನರಾ ಅಮ್ಮ ಎನಿಸಿಹ। ಜಗದಂಬ ಕಲ್ಲೂರು ಕ್ಷೇತ್ರದಲ್ಲಿ ನೆಲೆಸಿ ನಿಂತೂ। ಬಲ್ಲಿದಾ ಜನರಿಂದ ಸ್ತುತಿಯನು ಕೊಳ್ಳುತ್ತ। ಕಲ್ಲೂರು ಪುರವಾಸಿ ಕೊಲ್ಲಾಪುರ ನಿಲಯೇ॥3॥ ಕರದಿಂದ ವರವನ್ನು ಹರಸುತ್ತ ಸಿರಿದೇವಿ। ಹರುಷದಿ ಅಂಕುಶವ ಧರಿಸಿಹಳು ಇಲ್ಲೀ। ಹರಿ ಹರಿ ಎನ್ನುವರ ಪೊರೆಯುವೆ ಎಂದೆನುತ। ಹರಿವಾಹನಳಾಗಿ ಮೆರೆಯುತಿಹಳೂ

॥4॥ ಆರು ಅರಿಗಳ ಸವರಿ ಮೂರು ಮೂರು ಭಕುತಿ ಮೂರು ಕಾಲದಿ ಇತ್ತು ಸಲಹಬೇಕೆಂದೂ। ಮೂರು ಗುಣವರ್ಜಿತ ವರಾಹ ಹರಿ ವಿಠಲನ್ನ ಸೇರಿ ಭಜಿಸಿರಿ ಎಂದು ಸಾರುತ್ತ ನಿಂದೂ॥5॥

ಕಾಯೆ ನಿನ್ನ ಪಾದ ತೋಯಜಕೆರಗುವೆ **ರಾಗ: ಕಲ್ಯಾಣಿ**

ಕಾಯೆ ನಿನ್ನ ಪಾದ ತೋಯಜಕೆರಗುವೆ। ಮಾಯದೇವಿ ಹರಿ ಕಾಯ ನಿವಾಸೇ॥ಕಾಯೇ॥ಪ॥ ಬುದ್ಧಿಯ ಪ್ರೇರಿಸೆ। ಪ್ರದ್ಯುಮ್ನನ ಸತಿ। ಕರ್ದಮಜಾಲಯೆ। ಭದ್ರ ಶರೀರೆ ಕಾಯೆ॥1॥ ಇಂಗಡಲಾತ್ಮಜೆ। ಅಂಗನಾ ಕುಲಮಣಿ। ರಂಗನ ಪದ ಕಂಜ। ಭೃಂಗೆ ಕರುಣದಿ ಕಾಯೆ॥2॥ ಪ್ರಾಣೇಶ ವಿಠಲನ ಮಾನಿನೀಯೆನ್ನಯ। ಹೀನತೆಯೆಣಿಸದೆ। ಪೋಣಿಸಿ ಮತಿಯೆ॥3॥

ಕಿತ್ಲಿಂ ಧನ್ಯ ತೂಂ ಲಕ್ಷ್ಮೀ(ಏನುಧನ್ಯಳೋ ಲಕುಮಿಯಭಾವಾನುವಾದ) **ರಾಗ: ತೋಡಿ, ಆದಿತಾಳ**

ಕಿತ್ಲಿಂ ಧನ್ಯ ತೂಂ ಲಕ್ಷ್ಮೀ ಕಿತ್ತುಲಿ ಮಾನ್ಯ। ಸಾನುರಾಗಾನ ಹರಿಲಿ ಸೇವಾ ಕರ್ತಲಿ॥ಪ॥ ಕೋಟಿ ಕೋಟಿ ಸೇವಕ ಆಸ್ತನಾ। ನೀಲವರ್ಣಾಲಿ ಸೇವಾ ಸ್ವಹಸ್ತಾನ ಕೋರ್ನು। ಧನ್ಯ ದೃಷ್ಟಿನ ಪೂಸೀತ ಜಾಲ್ಲಿದೇವಿ॥1॥ ಛತ್ರ ಚಾಮರ ವ್ಯಜನ ಮಾಂಚ್ಯೋ ಜಾವ್ನು। ಪಾತ್ರ ಪರಿಕರಣ ಸರ್ಪರೂಪ ಘೇವ್ನು। ಚಿತ್ರಚರಿತ ಶ್ರೀಹರಿಸೇವಾ ಸತತ ಕೋರ್ನುಂ॥2॥ ಸರ್ವತ್ರ ವ್ಯಾಪ್ತ ಜಾಲ್ಲ್ಯಾ। ಸರ್ವದೋಷ ರಹಿತ ಜಾಲ್ಲ್ಯಾ। ಸರ್ವವಂದ್ಯ ಶ್ರೀಪುರಂದರವಿಠಲಾಲಿ ಸೇವಕೋರ್ನು॥3॥ ಶ್ರೀಃ॥

ಜತೆಗಾಣೆ ಜಗದಂಬೆ **ರಾಗ:ಕಾನಡ**

ಜತೆಗಾಣೆ ಜಗದಂಬೆ। ಆರ್ತಪಾಲನ ಜಾಣೆ॥ಪ॥ ಕ್ಷಿತಿಯೊಳಗೆ ಮದನ ಪಿತನ ಪಟ್ಟದ ರಾಣಿಗೆ॥ಅ.ಪ.॥ ಪಂಕಜ ಚರಣೆ ಕಳಂಕ ರಹಿತ ಮೃಗಾಂಕನ ವದನ ಮೀನಾಂಕನ ಜನನಿಗೆ॥1॥ ಚಂದಿರವದ ನಾರವಿಂದ ನಯನ ಶುಭ। ಕುಂದರದನೆ ಇಭ ಮಂದಗಮನೆಗೆ॥2॥ ಸುಂದರ ವಿಗ್ರಹ ಶ್ರೀಪತಿ ವಿಠಲನ। ಅಂದದಿ ಒಲಿಸಿದ ಇಂದಿರ ದೇವಿಗೆ॥3॥

ಜಗತ್ಪತಿಯ ತೋರಮ್ಮ **ರಾಗ: ಸುರುಟಿ,ಆದಿತಾಳ**

ಜಗತ್ಪತಿಯ ತೋರಮ್ಮ ಲಕುಮಿ ಕರುಣವ ಮಾಡಮ್ಮ ॥ಪ॥ ಅಘಗಳ ಕಳೆವ ಅಮೋಘ ದೇವನ್ನ ಭಕುತರ ಕಾವನ್ನ ಎನ್ನಯ ಜೀವನ್ನ॥ಅ.ಪ.॥ ಮೃಗಲಾಂಛನ ವದನೇ ಮೃದು ಸರಸಿಜ ಸದನೇ। ಹಗಲು ಇರುಳು ನಿನ್ನ ಸಂಯೋಗನ್ನ ಅನಂತ ಭೋಗನ್ನ ಕಿರೀಟಿಯ ಬೀಗನ್ನ॥1॥ ಭ್ರಮರ ಕುಂತಳೆ ಜಾಣೆ ಸುಮನಸ ಕೋಕಿಲಗಾನೇ। ಕಮಲ ತುಳಸಿ ಮಣಿ ಹಾರನ್ನ ಜಗದಾಧಾರನ್ನ ದಶಾವತಾರನ್ನ॥2॥ ಅಜರಮಣರ ಸಿದ್ಧಿ ತ್ರಿಜಗದೊಳ್ ಪ್ರಸಿದ್ಧಿ। ವಿಜಯವಿಠ್ಠಲ ಶ್ರೀನಿವಾಸನ್ನ ತಿರುವೆಂಗಳೇಶನ್ನ ಜಗವಪೋಷನ್ನ॥3॥

ಜಯ ಕೊಲ್ಲಾಪುರ ನಿಲಯೇ **ರಾಗ:ಕುರಂಜಿ, ಆದಿತಾಳ**

ಜಯ ಕೊಲ್ಲಾಪುರ ನಿಲಯೇ। ಭಜದಿಷ್ಟೇತರವಿಲಯೇ। ತವಪಾದೌ ಹೃದಿ ಕಲಯೇ। ರತ್ನರಚಿತವಲಯೇ॥ಪ॥ ಜಯ ಜಯ ಸಾಗರಜಾತೇ। ಕುರುಕರುಣಾಂ ಮಯಿ ಭೀತೇ। ಜಗದಂಬಾಭಿದಯಾ ತೇ। ಜೀವತಿ ತವ ಪೋತೇ॥1॥ ಜಯ ಜಯ ಸಾಗರಸದನಾ। ಜಯ ಕಾಂತ್ಯಾಜಿತ ಮದನಾ॥ ಜಯ ದುಷ್ಟಾಂತಕಕದನಾ। ಕುಂದಮುಕುಲರದನಾ॥2॥ ಸುರರ ಮಣೀನುತಚರಣೇ। ಸುಮನಸ್ಸಂಕಟಹರಣೇ॥ ಸುರರಮಣೀನುತಚರಣೇ। ಸುಮನಸ್ಸಂಕಟ ಹರಣೇ॥ ಸುಸ್ವರರಂಜಿತವೀಣೇ। ಸುಂದರನಿಜಕಿರಣೇ॥3॥ ಭಜದಿಂದೀವರಸೋಮಾ। ಭವಮುಖ್ಯಾ ಮರಕಾಮಾ। ಭಯಮೂಲಾಳಿವಿರಾಮಾ। ಭಂಜಿತಮುನಿಭೀಮಾ। ಕುಂಕುಮ ರಂಜಿತಪಾಲೇ॥4॥ ಕುಂಜರ ಬಾಂಧವ ಲೋಲೇ॥ ಕಲಧೌತಾಮಲಚೈಲೆ। ಕೃಂತಕುಜನಜಾಲೇ। ಧೃತಕರುಣಾರಸಪೂರೇ। ಧನದಾನೋತ್ಸವಧೀರೆ॥5॥ ಧ್ವನಿಲವನಿಂದಿತಕೀರೇ। ಧೀರೆ ದನುಜದಾರೇ। ಸುರಹೃತ್ಪಂಜರಕೀರಾ। ಸುಮಗೇಹಾರ್ಪಿತ ಹಾರಾ॥6॥ ಸುಂದರಕುಂಜವಿಹಾರಾ। ಸುರಪರಿವಾರಾ। ವರಕಬರೀಧೃತಕುಸುಮೇ। ವರಕನಕಾದಿ ಕಸುಷುಮೇ॥7॥ ವನನಿಲಯಾದಯ ಭೀಮೇ। ವದನವಿಜಿತಸೋಮೇ।

ಮದಕಲಭಾಲಸ ಗಮನೇ। ಮಧುಮಥನಾ ಲಸನಯನೇ।।8।। ಮೃದುಲೋಲಾಲಕರಚನೇ। ಮಧುರಸರಸಗಾನೇ। ವ್ಯಾಘ್ರಪುರೀವರನಿಲಯೇ। ವ್ಯಾಸಪದಾರ್ಪಿತಹೃದಯೇ।। ಕರುಕರುಣಾಂ ಮಯಿ ಸದಯೇ। ವಿವಿಧ ನಿಗಮಗೇಯೇ।।9।।

ನಮ್ಮಮ್ಮ ಸಿರಿದೇವಿ **ರಾಗ: ಕಾಪಿ, ಆದಿತಾಳ**

ನಮ್ಮಮ್ಮ ಸಿರಿದೇವಿ ದಮ್ಮಯ್ಯ ಬೇಡುವೆ। ಒಮ್ಮೆ ನಿನ್ನಯ ಕೃಪೆ ದಯತೋರೆ।।ಪ।। ಸುಮ್ಮನೆ ಇರಬೇಡ ಮಮ್ಮನೆ ಮರುಗುವೆ। ದುಮ್ಮಾನ ಕಳೆ ತಾಯೆ । ದಯೆ ಬಿಕ್ಷೆ ನೀಡಿ।।ಅ.ಪ.।। ನಿನಗೆಂತಹ ಸೌಭಾಗ್ಯವಿತ್ತಿಹನಮ್ಮ ಸನಿಹದಿ ನೀನಿದ್ದು ಅವನ ಸೇವಾ। ಅನುನಯದಿ ಮಾಡಿ ಸಂತೋಷ। ಗೊಳಿಸುತ್ತಾ ಇನಿಯನ ನೆರಳಂತೆ ಪಾಲಿಪೆ ಆಜ್ಞೆ।।1।। ದಿಟವಾಗಿ ನಂಬಿಹೆ ಸಟೆಯನು ವೇದಾ। ಕಟು ಭಕುತರಿಗೆಲ್ಲಾ ಇಟ್ಟಿಹ ದರುಶನ। ಕಟುವಾಗಿ ಇರಬೇಡ ಚುಟುಕು ದಯೆತೋರೆ। ಹಠಮಾರಿ ಅವನಲ್ಲ ವೆಂಕಟ ವಿಠಲ।।2।।

ಪಾಲಿಸೆ ಎನ್ನ ಶ್ರೀಮಹಾಲಕ್ಷ್ಮೀ **ರಾಗ: ಶ್ರೀರಾಗ, ಆದಿತಾಳ**

ಪಾಲಿಸೆ ಎನ್ನ ಶ್ರೀ ಮಹಾಲಕ್ಷ್ಮೀ।।ಪ।। ಪಾಲಿಸೆ ಎನ್ನನು ಪಾಲಾಬ್ಧಿ ಸಂಜಾತೆ। ಲಲಿತಾಂಗಿ ಶುಭೆ ದೇವಿ ಮಂಗಳೆ ದೇವಿ।।ಅ.ಪ।। ವೇದಾಭಿಮಾನಿ ಸಾರಸಾಕ್ಷಿ ಶ್ರೀಧರ ರಮಣಿ। ಕಾದುಕೊ ನಿನ್ನಯ ಪಾದಸೇವಕರನ್ನು। ಆದಿಶಕ್ತಿ ಸರ್ವಾಧಾರೆ ಗುಣಪೂರ್ಣೆ ।।1।। ದಯದಿಂದ ನೋಡೆ ಭಜಿಪ ಭಕ್ತರ। ಭಯ ದೂರಮಾಡೆ ದಯಪಾಲಿಸೆ ಮಾತೆ। ತ್ರೈಲೋಕ್ಯ ವಿಖ್ಯಾತೆ ಜಯದೇವಿ ಸುವ್ರತೆ ಜಗದೀಶನ ಪ್ರೀತೆ ।।2।। ನೀನಲ್ಲದನ್ಯ ರಕ್ಷಿಪರನು ಕಾಣೆ ನಾ ಮುನ್ನ ದಾನವಾಂತಕ ಸಿರಿ ಪುರಂದರವಿಠಲನ। ಧ್ಯಾನಿಪ ಭಕುತರ ಮಾನ ನಿನ್ನದು ತಾಯೆ ।।3।।

ಲಕ್ಷ್ಮೀ ನೀ ಬಾರಮ್ಮ **ರಾಗ: ಗೌರಿಮನೋಹರಿ**

ಲಕ್ಷ್ಮೀ ನೀ ಬಾರಮ್ಮ ಮನೆಗೆ।।ಪ।। ಬಾರಮ್ಮ ಮನೆಗೆ ನೀ ಭಾಗ್ಯದ ಲಕ್ಷ್ಮಿಯೇ। ತೋರಮ್ಮ ನನಗೆ ದಯಾ ತೋರಿಸು ತಾಯೇ।।ಅ.ಪ।। ಕಾಲಂದುಗೆ ಗೆಜ್ಜೆ ಘಲುಘಲು ಘಲುರೆನುತ। ನೀಲವರ್ಣನ ಕೂಡಾ ನಲಿದಾಡು ತಾಯೇ।।1।। ಸಕ್ಕರೆ ತುಪ್ಪದ ಕಾಲುವೆ ಹರಿಸುತ ಶುಕ್ರವಾರದ ಪೂಜೆಗೆ ಬಾರಮ್ಮ ಮನೆಗೆ।।2।। ವೆಂಕಟವಿಠಲನ ಬಿಂಕದರಾಣಿಯೇ ಪಂಕಜೋದ್ಭವಳೆ ನೀ ಬಾರಮ್ಮ ಮನೆಗೆ।।3।।

ವರ್ಣಿಸಲೆನ್ನಿಂದ ತರವೇ ಕೊಲ್ಲಾಪುರದ **ರಾಗ: ಮಧ್ಯಮಾವತಿ**

ವರ್ಣಿಸಲೆನ್ನಿಂದ ತರವೇ ಕೊಲ್ಲಾಪುರದ ಲಕ್ಷ್ಮಿಯಾ। ಸರ್ಪಶಯನನ ರಾಣಿ। ಮುತ್ತಿನ ಕಟ್ಟಾಣಿ। ಭಕ್ತರ ಚಿಂತಾಮಣಿ। ಸುಪ್ವಾಣಿ। ಅರಗಿಣಿ। ನಿತ್ಯ ಮಂಗಳ ವಾಣಿ।।1।। ಕರಿಯಸೊಂಡಿಲ ಕರಕಡಗ ಕಂಕಣದ್ವಾರ್ಯ। ಮುಡಿದ ಮಲ್ಲಿಗೆಸರ ಬಡನಡು ಬಳುಕುತ್ತಾ ನಡೆ ಗಜ ಗಮನೆಯೆ।।2।। ದಂತ ದಾಳಿಂಬವೂ। ಸಂಪಿಗೆ ನಾಸಿಕವೂ। ಕುಂಕುಮ ಫಣೆಯೋಳು।ಶಂಖದಂದದಿ ಕೊರಳು। ಮಿಂಚಿನಂತ್ಹೊಳೆಯುವಳು।।3।। ತುಂಬೆಗುರುಳಿನೊಳು ಭುಜಂಗನಂದದಿ ಜಡೆ। ಆನಂದ ರೂಪವು। ಬೆಳದಿಂಗಳೋಲ್ ನಗೆಮುಖಾ। ಕಂಗಳೋಳ್ಢಾಳ್ಯವು।।4।। ಕನಕಾರ್ಚಿತ ಬೊಂಬೆ। ನಿನಗೇ ನಾ ಶರಣೆಂಬೆ। ಹರಿಶೇಷಗಿರಿ ರಂಭೆ। ಜಗಕೆ ನೀ ಜನನಿ ಎಂಬೆ। ಕರುಣಿಸೇ ಜಗದಂಬೆ।।5।।

ಶ್ರೀಮಹಾಲಕುಮಿ ದೇವಿಯೇ

ಶ್ರೀಮಹಾಲಕುಮಿ ದೇವಿಯೇ ಕೋಮಲಾಂಗಿಯೆ। ಸಾಮಗಾನ ಪ್ರಿಯಳೇ।।ಪ।। ಹೇಮಗರ್ಭ ಕಾಮಾರಿ ಶಕ್ರಸುರಸ್ತೋಮ ವಂದಿತಳೇ। ಸೋಮಸೋದರಿಯೆ।।ಅ.ಪ।। ಬಟ್ಟಕುಂಕುಮ ನೊಸಲೋಳೆ। ಮುತ್ತಿನ ಹೊಸ ಕಠ್ಠಾಣಿ ತ್ರಿವಳಿಕೊರಳೋಳೇ। ಇಟ್ಟಪೊನ್ನೋಲೆ ಕಿವಿಯೊಳೆ। ಪವಳದಕೈಯ ಕಟ್ಟುಕಂಕಣ ಕೈಬಳೆ। ತೊಟ್ಟ ಕುಬುಸ ಬಿಗಿದುಟ್ಟ ಪೀತಾಂಬರ। ಘಟ್ಟಿ ವಡ್ಯಾಣಕಾಲಂದುಗೆ ರುಳಿಗೆಜ್ಜೆ। ಬೆಟ್ಟಲಿ ಪೊಳೆವುದು ಮೇಂಟಕೆ ಕಿರುಪಿಲ್ಲಿ। ಇಟ್ಟು ಶೋಭಿಸುವ ಅಷ್ಟಸಂಪನ್ನೆ।।1।। ಸಕಲ ಶುಭಗುಣಭರಿತಳೆ ಏಕೋದೇವಿಯೆ ವಾಕುಲಾಲಿಸಿ ನೀ ಕೇಳೆ। ನೋಕನೀಯನ್ನ ಮಹಲೀಲೆ

ಕೊಂಡಾಡುವಂಥ ಏಕಮನವ ಕೊಡು ಶೀಲೆ। ಬೇಕು ಬೇಕು ನಿನ್ನ ಪತಿಪದಾಬ್ಜವ। ಏಕಾಂತದಿ ಪೂಜಿಪರ ಸಂಗ ಕೊಡು। ಲೋಕದ ಜನರಿಗೆ ನಾ ಕೈಯೊಡ್ಡದಂತೆ। ನೀಕರುಣಿಸು ತಾಯಿ ರಾಕೇಂದುವದನೆ॥2॥ ಮಂದರಭರನರಸಿಯೆ ಇಂದಿರೆ ಎನ್ನ ಕುಂದುದೋಷಗಳಳಿಯೆ। ಅಂದಸೌಭಾಗ್ಯದಸಿರಿಯೆ ತಾಯೆ ನಾನಿನ್ನ ಕಂದ ಮುಂದಕ್ಕೆ ಕರೆಯೆ॥ ಸಿಂಧುಶಯನಸಿರಿ ವಿಜಯ ವಿಠ್ಠಲರೇಯ ಎಂದೆಂದಿಗೆ ಮನದಿಂದಗಲದೆ ಆ। ನಂದದಿ ಬಂದು ಮುಂದೆಕುಣಿಯುವಂತೆ ವಂದಿಸಿ ಪೇಳಮ್ಮ ಸಿಂಧುಸುತೆಯಳೆ॥3॥

ಸರಸಿಜ ನೇತ್ರೆ ಶ್ರೀ ಲಕ್ಷ್ಮೀ ಬಾರಮ್ಮ **ರಾಗ: ಲಲಿತ**

ಸರಸಿಜ ನೇತ್ರೆ ಶ್ರೀ ಲಕ್ಷ್ಮೀ ಬಾರಮ್ಮ। ಶ್ರೀ ಲಲಿತಾಂಬೆಯೆ ಕರುಣೆಯ ತೋರಮ್ಮ॥ಪ॥ ಕುಂಕುಮಾರ್ಚನೆಯಿಂದ ನೀನೊಲಿವೆಯಂತಮ್ಮ। ದಧಿಕ್ಷೀರ ಮಧುಪರ್ಕಬಲುಇಷ್ಟವಂತಮ್ಮ। ಕರವೀರ ಮಂದಾರ ಪುಷ್ಪ ಬಯಸುವೆಯಮ್ಮ। ನಾನಾರೀತಿಯ ತಿನಿಸು ನಿನ್ನ ನೈವೇದ್ಯವಮ್ಮ॥1॥ ಶುಕ್ರವಾರದಂದು ಗೋಧೂಳಿ ಸಮಯದಿ। ಮುತ್ತೈದೆಯರು ಕೂಡಿ ನಿನ್ನನಾರಾಧಿಸುವರು। ಆರತಿ ಧೂಪದೀಪ ಬೆಳಗುತ ನಿನಗೆ। ಸೌಭಾಗ್ಯ ನೀಡೆಂದು ಪರಿಪರಿ ಪ್ರಾರ್ಥಿಪರು॥2॥ ಬೇಡಿದ ವರಗಳ ಕರುಣಿಸು ನೀ ತಾಯೆ। ಹೃದಯಮಂಟಪದಿ ನೀನೆಲಸು ತಾಯೆ। ನಿರವಧಿ ಸುಖವನು ದಯಪಾಲಿಸು ತಾಯೆ। ಚೈತನ್ಯದಾಸನನು ಅನುಗ್ರಹಿಸು ತಾಯೆ॥3॥

ಕ್ಷೀರ ಸಮುದ್ರನ ಕುಮಾರಿ ನಿನ್ನ **ರಾಗ: ಗೌಳ, ಆದಿತಾಳ**

ಕ್ಷೀರ ಸಮುದ್ರನ ಕುಮಾರಿ ನಿನ್ನ ಸರಿಸಮಾನರ್‍ಯಾರಮ್ಮ॥ಪ॥ ಭೀಮೇಶ ಮೊದಲಾದ ಮಾರ ನಿಖರವು ಭ್ರಮಿಸಿ। ನಿಮ್ಮ ಪಾದ ಸ್ಮರಣೇಯ ಮಾಳ್ಪರೆ॥ಅ.ಪ॥ ಅಪಾರ ಮಹಿಮಳೆ ವ್ಯಾಪಾರಗಳ ಕಂಡು। ಕಾಪಾಡುವೇ ಜಗವಾ। ಕೋಪಾರಹಿತಳಾಗಿ ಶ್ರೀಪತಿಯೊಳು ನಮ್ಮ। ತಾಪತ್ರಯಂಗಳ ಬಿಡಿಸಿ ಕಾಪಾಡಬೇಕಮ್ಮ॥1॥ ಕರುಣಾವಾರಿಧಿಯೆಂದು ಶರಣ ಜನರು ನಿಮ್ಮ। ಸ್ಮರಣೇಯ ಮಾಡುವರೇ। ಹರಿಣಾಕ್ಷಿ ಕೇಳೆನ್ನ ಕರುಣಾದಿಂದಲಿ ಎಮ್ಮ। ದುರಿತಾವ ತಿಳಿದು ನೀ ಹರುಷಾವ ತಾರಮ್ಮ॥2॥ ವಾಸಾ ವಂದಿತ ಸಿರಿ ಶೇಷವಿಠಲನೊಳು। ವಾಸಾವ ಮಾಡುವಳೇ। ಘಾಸೀಯ ಮಾಡದೆ ಈ ಸಮಯದೊಳು ನೀನು। ವಾಸುದೇವಗೆ ಪೇಳಿ ಪೋಷಿಸಬೇಕಮ್ಮ॥3॥

ಭಕ್ತಿಗೀತೆ

ಅದಿಗೋ ವೈಭವಲಕ್ಷ್ಮಿ **ರಾಗ: ಮಧ್ಯಮಾವತಿ, ಆದಿತಾಳ**

ಅದಿಗೋ ವೈಭವಲಕ್ಷ್ಮಿ। ನಿಜರೂಪಮೂ। ಬಿರುನವು ಮೋಮುತೊ। ವೆಲಗಿನ ಮಾತಲ್ಲಿ॥ಪ॥ ಕ್ಷೀರಾಬ್ಧಿ ಕನ್ನಿಕ। ಕ್ಷಿತಿಲೋನವೆಲಸಿ। ಗಿರಿಸಂಪದ ಮುಲಕು। ಆದಿದೇವಿವೈ। ಶ್ರೀವರ ರೂಪಿಣಿ। ಸಿಂಧೂರ ಭೂಷಿಣಿ। ಕರುಣಿಂಚಿ ದೇವಿಂಚಿ। ಕೃಪಜೂಡವಮ್ಮ॥1॥ ಎನ್ನಾಳ್ಳು ವೇಡಿನ। ನಿನುಗಾನಲೇನಮ್ಮ। ಚಿನ್ನಗ ವೇಡಿನ। ನನುಜೂಡವಮ್ಮ। ಉನ್ನತಮ್ಮೆನ ಪ್ರಸನ್ನಲಕ್ಷ್ಮಿವಮ್ಮ। ಮನ್ನಿಂಚಿ ಲಾಲಿಂಚಿ। ದಯಚೂಪಿರಾಮ್ಮ॥2॥

ಅನುದಿನ ಪೂಜಿಪೆನು **ರಾಗ: ಜುಂಜೂಟಿ, ಆದಿತಾಳ**

ಅನುದಿನ ಪೂಜಿಪೆನು ಹರಿಪ್ರಿಯೆ। ಅನುದಿನ ಪೂಜಿಪೆನು॥ಪ॥ ಅರಿಶಿನ ಕುಂಕುಮ ಗಂಧ ಪುಷ್ಪಗಳಿಂದ। ಅರಳಿದ ಮಲ್ಲಿಗೆ ಮರುಗಗಳಿಂದ॥1॥ ದೀಪ ಧೂಪ ನೈವೇದ್ಯಗಳಿಂದ। ಪಾಪರಹಿತ ಪರಾಕ್ರಮ ಲಕ್ಷ್ಮೀ ನಿನ್ನ॥2॥

ಅಷ್ಟ ಲಕ್ಷ್ಮೀಯರ ದಿವ್ಯಾರ್ಚನೆ **ರಾಗ: ಶ್ರೀ, ಏಕತಾಳ**

ಅಷ್ಟ ಲಕ್ಷ್ಮೀಯರ ದಿವ್ಯಾರ್ಚನೆ। ವಿಶಿಷ್ಟದೇವಿಯ ಆರಾಧನೆ। ಇಷ್ಟ ದೇವತೆಯು ಕಷ್ಟ ತೀರಿಸಿ ಅಭೀಷ್ಟ ನೀಡುವಳು ದಿನೇ ದಿನೇ॥ಪ॥ ಪಾಲ ಕಡಲನು ಕಡೆಯುವ ಸಮಯದಿ। ಉದಿಸಿ ಬಂದವಳೆ ಆದಿಲಕ್ಷ್ಮೀ (2ಸಾರಿ)। ಶ್ರೀ ಹರಿ ಹೃದಯ ಸಾಮ್ರಾಜ್ಞಿಯಾಗಿ। ಅನುಗ್ರಹ ತರುವಳೆ ಗಜಲಕ್ಷ್ಮೀ (2ಸಾರಿ)॥1॥ ಬಡತನ ನೀಗುವ ಸಿರಿತನ ನೀಡುವ।

ದಯಾಮಯಿಯು ನೀ ಧನಲಕ್ಷ್ಮೀ(2ಸಾರಿ)। ಭುವಿಯಲಿ ಹಸುರಿನ ನೃತ್ಯವ ಮಾಡಿಸಿ। ಹಸಿವನು ನೀಗುವೆ ಧಾನ್ಯಲಕ್ಷ್ಮೀ (2ಸಾರಿ) ।।2।। ಅಜ್ಞಾನವೆಂಬ ಇರುಳನು ನೀಗಿಸಿ। ಜ್ಞಾನವ ಬೆಳಗುವ ವಿದ್ಯಾಲಕ್ಷ್ಮೀ (2ಸಾರಿ)। ಹಿಡಿದ ಕಾರ್ಯದಲಿ ಗೆಲುವನು ತಂದು। ವರಗಳ ಕರೆವಳೇ ವಿಜಯಲಕ್ಷ್ಮೀ (2ಸಾರಿ) ।।3।।ಎಲ್ಲಾ ಸಮಯದಲು ಕಷ್ಟ ಎದುರಿಸಲು। ನೀನೇ ಗತಿಯಮ್ಮ ಧೈರ್ಯಲಕ್ಷ್ಮೀ (2ಸಾರಿ)। ಮಡಿಲ ತುಂಬುತ ಮನವ ನಲಿಸುತ। ವಂಶವ ಬೆಳೆಸುವ ಸಂತಾನಲಕ್ಷ್ಮೀ (2ಸಾರಿ)।।4।।

ಅರಿಶಿನವ ಹಚ್ಚಿರಿ ಶ್ರೀಲಕ್ಷ್ಮಿಗೆ **ರಾಗ: ಕಲಾವತಿ, ಆದಿತಾಳ**

ಅರಿಶಿನವ ಹಚ್ಚಿರಿ ಶ್ರೀಲಕ್ಷ್ಮಿಗೆ। ಕುಂಕುಮವ ಹಚ್ಚಿರಿ ಮಹಾಲಕ್ಷ್ಮಿಗೆ।।ಪ।। ಶರ್ವಾಣಿ ಕಲ್ಯಾಣಿ ಶ್ರೀದೇವಿಗೆ। ಶ್ರೀರಂಗನಾ ಒಡತಿ ಜಗನ್ಮಾತೆಗೆ।।ಅ.ಪ.।। ತ್ರೈಲೋಕ್ಯಮಾತೆ ನೀ ಭಕ್ತರನು ಸಲಹುವೆ। ಶರ್ವಾಣಿ ಕಲ್ಯಾಣಿ ಶ್ರೀದೇವಿಗೆ। ಮಂಗಾಪುರದಲ್ಲಿ ನೆಲೆಸಿರುವ ಶ್ರೀಮಾತೆ। ಶ್ರೀರಂಗನಾ ಒಡತಿ ಜಗನ್ಮಾತೆಗೆ।।1।। ಸಜ್ಜನರ ಪೊರೆಯಲು ಧರೆಗಿಳಿದು ಬಂದಂತೆ। ಶರ್ವಾಣಿ ಕಲ್ಯಾಣಿ ಶ್ರೀದೇವಿಗೆ। ಸುಮನಸರ ಶುಭಕಾಗಿ ಮೈತಳೆದು ನಿಂತ। ಶ್ರೀರಂಗನಾ ಒಡತಿ ಜಗನ್ಮಾತೆಗೆ।।2।।

ಇವಳೇ ಕಮಲೆ ಕಮಲಿನಿ ಕಮಲಾನನಿ **ರಾಗ: ಅಭೇರಿ, ಆದಿತಾಳ**

ಇವಳೇ ಕಮಲೆ ಕಮಲಿನಿ ಕಮಲಾನನಿ। ಇವಳೆ ವಿಮಲೆ ಕೋಮಲೆ ಕಮಲಾಸನಿ।।ಪ।। ಇವಳೆ ಶರಧಿ ಕುವರಿಯೇ। ಬಲು ಚಂಚಲೇ ಸಿರಿಯು ಸೌಭಾಗ್ಯವು ಇವಳ ಲೀಲೆ।।ಅ.ಪ।। ಶ್ರೀಲಕ್ಷ್ಮಿ ಭುವಿಯಲ್ಲಿ ಪದ್ಮಾವತಿ। ವೈಕುಂಠ ತೊರೆದ ಹರಿಯ ಆ ಮಹಾಸತಿ। ಮೂರ್ ಲೋಕ ಎತ್ತುವುದು ಮುತ್ತಿನಾರತಿ। ನಂಬಿದಂಥ ನರರಿಗೆಲ್ಲಾ ಇವಳೇ ಗತಿ।।1।। ಇವಳ ಕರುಣೆಯಿಂದಲೇ। ಧನಧಾನ್ಯವೆಲ್ಲಾ। ಇವಳ ಚರಣ ಧೂಳಿಯೇ ಸೌಭಾಗ್ಯವೆಲ್ಲಾ। ಇವಳ ಸ್ಮರಣೆಯಿಂದಲೇ। ಸಂತೋಷವೆಲ್ಲಾ। ಈ ತಾಯಿ ಒಲಿದ ಮೇಲೆ ಕುಂದುಕೊರತೆ ಇಲ್ಲಾ।।2।।

ಈಗ ಹೂ ಕೊಡೆ ಬೇಗದಿಂದ **ರಾಗ: ಮಾರ್ಗಹಿಂದೋಳ**

ಈಗ ಹೂ ಕೊಡೆ ಬೇಗದಿಂದ ತಾಯೆ।।ಪ।। ಈಗ ಹೂವನು ಬೇಗದಿಂದಲೆ ನಾಗಶಯನನ ಪಟ್ಟದರಸಿಯೆ।।ಅ.ಪ.।। ಕಮಲದಲ್ಲಿ ನೀ ಹುಟ್ಟಿದೆ ತಾಯೆ। ಕಮಲನಾಭನಾ ಪಟ್ಟದರಸಿಯೆ।।1।। ಪದುಮದಲ್ಲಿ ನೀ ಪುಟ್ಟಿದೆ ತಾಯೆ। ಪದುಮ ನಾಭನ ಪಟ್ಟದರಸಿಯೆ।।2।। ಮುತ್ತೈದೆತನ ಮುಡಿಯ ಪಾಲಿಸಮ್ಮ। ಕೊಟ್ಟುರಕ್ಷಿಸು ಪೂವ ಕೃಷ್ಣನರಸಿಯೆ ।।3।।

ಎಂದು ಬರುವಳೋ ಗೋವಿಂದನೊಲ್ಲಭೆ **ರಾಗ: ಆರಭಿ, ಆದಿತಾಳ**

ಎಂದು ಬರುವಳೋ ಗೋವಿಂದನೊಲ್ಲಭೆ ಲಕ್ಷ್ಮೀ। ರಂಗನ ಸನ್ನಿಧಿಗೆ। ಮಂಗಳಾಂಗಿಯ ಸರ್ವಾಂಗವು ಬಳಲಿದ್ದು। ಕಂದಿ ಕಳೆಗುಂದಿಹುದು ಬಲು ವ್ಯಥೆಯಿಂದ।।ಪ।। ವೆಂಕಟ ವಿಠಲ ವೈಕುಂಠಪತಿ ಲಕ್ಷ್ಮೀಕಾಂತ ಏಕಾಂತದೊಳು। ಶಂಖುಚಕ್ರಧರ ಸರ್ವಮಂಗಳಕರ ಸಂಚಿತ ಭ್ರಮರೈಕ್ಯನು ಮಲಗಿರುವನು।।1।। ಶೇಷನ್ನಾಸಿಗೆ ಮೇಲೆ ವಾಸುದೇವರು ಲಕ್ಷ್ಮೀ ಉಲ್ಲಾಸದಿಂ ಕುಳಿತಿರಲು। ಆಸಮಯದಿ ಭೃಗುಮುನಿ ಬಂದು ಕೋಪಿಸೆ ಸೋಕಿಸಿದನು ಪಾದವ ವಕ್ಷಸ್ಥಳಕೇ ।।2।। ತಟ್ಟನೆ ಇಳಿದಳು ಸಿಟ್ಟಿನಿಂದಲಿ ಬಹು ಧಿಕ್ಕಾರ ಮಾಡಿದಳು। ಲಕ್ಷ್ಮೀರಮಣ ನೆಂಬೊ ಬಿರುದು ನಿನಗೆ ಈ ಹೊತ್ತಿಗೆ ಸರಿಯೇ ಎಂದು ತೆರಳಿದಳು।।3।। ನಿಲ್ಲದೇ ಹೊರಟಳು ಫುಲ್ಲಾಬ್ಜ ನೇತ್ರೆ ಬಲು ತಲ್ಲಣಗೊಳುತಿರಲು। ವಲ್ಲಭನರಿಯದ ಸ್ಥಳವಿಲ್ಲವೆನುತಲಿ। ಕೊಲ್ಲಾಪುರಕೆ ಬಂದು ನೆಲೆಸಿದಳು।।4।। ಅಕ್ಷಯ ಪತಿ ಲಕ್ಷ್ಮೀ ಇರುವ ಸ್ಥಳವ ಕಂಡು ಪ್ರಾರ್ಥಿಸಿ ಬೇಡಲಂದೂ। ಪೃಥ್ವಿಯೊಳಗೇ ಪತ್ನಿ ನೀನೇನೆಂಬುವುದನ್ನು ತೋರಿಸಿ ದಯಮಾಡಿನ್ನು ಶ್ರೀದೇವಿ ನೀನು।।5।। ಕ್ಷೀರಾಬ್ಧಿ ಜಾತೆ ಬಾ ಮಾರನ ಮಾತೆ ಬಾ ವಾರಿಜದಳ ನೇತ್ರೆ ಬಾ। ಮೂರು ಲೋಕದಲ್ಲಿ ಪ್ರಖ್ಯಾತೆ ಬಾರೆಂದು। ಶ್ರೀಮನ್ನಾರಾಯಣ ಕರೆಯಲು ನಸುನಗೆಯೊಳು।।6।। ಜಯಲಕ್ಷ್ಮೀ ರಮಣಗೆ ಜಯ ಶ್ರೀನಿವಾಸಗೆ। ಜಯ ಮೋಕ್ಷದಾಯಕಗೆ ಜಯ। ಕೊಲ್ಲಾಪುರದಲ್ಲಿ ನೆಲೆಸಿ ಶ್ರೀಹರಿ ವಕ್ಷಸ್ಥಳದೊಳು ಮೆರೆವಳಿಗೆ। ಶ್ರೀಹರಿ ಸೇವೆಗೆ।।7।।

ಎಷ್ಟು ಆನಂದವಾಗಿದೆ ಲಕ್ಷ್ಮೀಪೂಜೆಯು **ರಾಗ:ಆರಭಿ**

ಎಷ್ಟು ಆನಂದವಾಗಿದೆ ಲಕ್ಷ್ಮೀಪೂಜೆಯು।।ಪ।। ಎಲ್ಲಿ ನೋಡಿದರು ಕದಳಿ ಕಂಬಗಳು। ಎಲ್ಲಿ ನೋಡಿದರು ಚಿತ್ರ ಪಟಗಳು। ಎಲ್ಲಿ ನೋಡಿದರು ಹೊಳೆವ ಜ್ಯೋತಿಗಳು।।1।। ಶುಕ್ರವಾರದ ಸಂಜೆಯಲ್ಲಿ ಭಕ್ತರೆಲ್ಲ ಸೇರಿನಿಂತು। ಭಕ್ತಿಪೂರ್ವಭಾವದಿಂದ ನಮಿಪೆವೆಸಗು ದೀಪದಿ।।2।। ಕುಸುಮಗಳನೆ ಕೊಯ್ದುತಂದು ಕುಸುಮನೇತ್ರೆ ಪಾದಕರ್ಪಿಸಿ। ಭಕ್ತಿ ಪೂರ್ಣರಾಗಿ ತಾಯಪಾದಕೆ ಎರಗುವೆವು।।3।।

ಎನ್ನ ಗುರು ಲಕ್ಷ್ಮೀಯನು **ರಾಗ: ಶುಭಪಂತುವರಾಳಿ**

ಎನ್ನ ಗುರು ಲಕ್ಷ್ಮೀಯನು ಇನ್ನೆಲ್ಲಿ ಕಾಣುವೆನು। ಶೋಕ ಮೋಹಕೆ ತಗುಲಿ ವ್ಯಾಕುಲದಲಿ ನಾನಿರಲು।।ಪ।। ಆಕಳು ಕರುವನು ಅರಸಿ ಬಂದ ತೆರದಲೆನ್ನಯ ಮನಕೆ। ಲೋಕ ಪಾವನೆ ಬಂದು ವಿವೇಕಗಲೆಲ್ಲವ ಪೇಳಿ। ಮುಖಭಾವವ ತೋರಿದ ಮುತ್ಯಾಂಗನೆ ಕಣ್ಣಿನಾಲಯದೊಳಗಿರುವ ಎನ್ನು ಗುರು ಲಕ್ಷ್ಮೀಯನು।।1।। ಅಖಿಳಾತ್ಮಕದಳದ ಒಳಹೊರಗೆ ಆನಂದಗಳೆಲ್ಲವ ತಿಳಿದು। ಸಕಲಾಗಮದೊಳಗಿರುವೋ ಸಾಗರಗಳೆಲ್ಲವ ಪೇಳಿ। ಸುಖವಾಗಿರು ನೀನೆಂದು ಸುಂದರ ರೂಪವ ತೋರಿ। ಮುಖಭಾವವ ತೋರಿದ ಮುಕ್ತಾಂಗನೆ।।2।। ಆಗಭೋಗದ ಬಯಲ ಭ್ರಮೆ ರೋಗಗಳೆಲ್ಲವ ಬಿಡಿಸಿ। ಸಾಧನ ಸಂಪತ್ತಿನ ಸೌಖ್ಯದೊಳೆನ್ನನು ಇರಿಸಿ। ಕೂಗುತಲಿಹ ದಶನಾದದ ಕುರುಹುಗಳೆಲ್ಲವ ಉರುಟಿಸಿ। ಮೂಗಿನ ಕೊನೆಯಲಿ ತೋರಿದ ಮುಕ್ತಾಂಗನೆ।।3।।

ಏನು ಆನಂದವಾಗಿದೆ ಶ್ರೀ ಲಕ್ಷ್ಮೀಪೂಜೆ **ರಾಗ: ಕಲ್ಯಾಣಿ**

ಏನು ಆನಂದವಾಗಿದೆ ಶ್ರೀ ಲಕ್ಷ್ಮೀಪೂಜೆ।।ಪ।। ಮರುಗ ಮಲ್ಲಿಗೆಯು ಸುರಗಿ ಪಾದರಿಯು। ನಾನಾವಿಧ ಪುಷ್ಪದಿಂದ ಪೂಜೆಮಾಡಿ ಬೇಡುತಿರುವೆನು।।ಅ.ಪ.।। ದಧಿ ಮಧುಘೃತ ಕ್ಷೀರದಿ ಮಧುಭಕ್ಷ್ಯ ನೈವೇದ್ಯ। ಗೆಜ್ಜೆ ವಸ್ತ್ರಗಳನ್ನು ಧರಿಸಿ ಮೂಜಗದ ತೇಜ ಪೋಲುವ ಲಕ್ಷ್ಮೀಗೇನು ಆನಂದವಾಗಿದೆ।।1।। ಶುಕ್ರವಾರದ ಶುಭದಿವಸದಲ್ಲಿ ಲಕ್ಷಮಲ್ಲಿಗೆ ಪೂಗಳಿಂದ ಅಕ್ಷಯಾದ ಸುಖವನಿತ್ತು ರಕ್ಷಿಸೆಂದು ಬೇಡುತಿರುವೆನು।।2।। ಮಂದಗಮನೆಯರೆಲ್ಲ ಸೇರಿ ಚಂದದಿಂದ ಸೇವೆಮಾಡಿ। ಸಂಗೀತ ನಾಟ್ಯಗಳನ್ನು ಪಾಡಿ ಆಡಿ ಮಂಗಳಾರತಿಯನೆತ್ತಿ।।3।।

ಓಂ ನಮೋ ನಾರಾಯಣಿ **ರಾಗ: ರೇವತಿ, ಆದಿತಾಳ**

ಓಂ ನಮೋ ನಾರಾಯಣಿ ತ್ರೈಲೋಕ್ಯಪಾಲಿನಿ। ಓಂಕಾರರೂಪಿಣಿ ವಿಶ್ವಕಲ್ಯಾಣಿ।।ಪ।। ನಾರಾಯಣ ಪ್ರಿಯೆ ನಾರದ ಸನ್ನುತೆ। ಸಾರಸಮುಖಿ ಲಕುಮಿ ಸರಸಿಜನಾಭಕಾಂತೆ।।ಅ.ಪ।। ಸಕಲಾಗಮಸ್ತುತೆ ಸರಸಿಜಾಸನಮಾತೆ। ಸಕಲ ಸುರಾಸುರ ಉರಗ ಭೂಸುರನುತೆ। ಸಕಲ ಕಲಾಧರೆ ಸರಸಿಜಕರಯುತೆ। ಸಕಲ ವೇದಾರ್ಥಸಾರೆ ಸರಸಿಜನೇತ್ರೆ।।1।। ಗರುಡ ವಾಹಿನಿ ಗಜಗಾಮಿನಿ ಹಂಸಗಮನಿ। ಹರುಷದಾಯಿನಿ ಅರಿಶಿನ ಕುಂಕುಮ ಶೋಭಿಣಿ। ಸರುಪಶಯನನರಾಣಿ ಸಿಂಧೂರ ಭೂಷಿಣಿ। ವಿರುಪಕಾಂಚನಾಭರಣೆ ದೇವೀ ಮಹಾಲಕ್ಷ್ಮೀ ಮೋಕ್ಷಪ್ರದಾಯಿನಿ।।2।।

ಕವಳ ತಾಯಿ ಕವಳ **ರಾಗ: ನಾದನಾಮಕ್ರಿಯ**

ಕವಳ ತಾಯಿ ಕವಳ ಅಮ್ಮ।।ಪ।। ಪಾಪಿ ಪರದೇಶಿ ನಾನು ಕವಳ ನೀಡಿರಮ್ಮ ।।ಅ.ಪ.।। ಸಂಜೆಯ ಕವಳಕ್ಕೆ ಸಾವಿರ ಆಪತ್ತು। ಸಂಜೆ ಓಡುವುದೆಂದು ಕೇಳಿಲ್ಲವೇನಮ್ಮ। ಭುಂಜಿಸಿ ನಿಮ್ಮಯ ಪತಿಯ ಪ್ರಸಾದದ। ಎಂಜಲು ಎನ್ನ ಜೋಳಿಗೆಗಿಷ್ಟು ನೀಡವ್ವ।।1।। ನಮದೊಂದು ಸಂಸಾರ ಬಲು ದೊಡ್ಡದಮ್ಮ। ಶ್ರಮಿಸುವರದರೊಳಗೊಬ್ಬರಿಲ್ಲವ್ವ। ಕಮಲವ್ವ ನಿಮ್ಮಯ ಅಮೃತ ಹಸ್ತದ ಕವಳ। ಎಮಗೊಂದು ಕ್ಷಣದಲಿ ಅಮೃತ ವಾಗುವುದವ್ವ।।2।। ಮಿತಿಯಿಲ್ಲದೈಶ್ವರ್ಯ ನಿಮಗಿಹುದೆಂದು। ಕ್ಷಿತಿಯೊಳು ಜ್ಞಾನಿಗಳಾಡುತಿಹರು। ಅತುಲ ಮಹಿಮ ನಿಮ್ಮ ಪತಿಯ ಪ್ರಸಾದವ। ಪ್ರತಿದಿನವಿತ್ತು ಪ್ರಸನ್ನರಾಗಿರವ್ವ।।3।।

ಕಾಕ್ಷಿ ಕಣ್‌ಕಾಕ್ಷಿಯೇ (ತಮಿಳು) **ರಾಗ: ಭೈರವಿ, ಆದಿತಾಳ**

ಕಾಕ್ಷಿ ಕಣ್‌ಕಾಕ್ಷಿಯೇ ನಾಮಗಿರಿ ಅಮ್ಮನ್ ಸೇವೈ ಎನ್ನಾ।।ಪ।। ಆವಲುಡನ್‌ವಂದ ಪೇರ್ಕು ಸೇವೈಗಳ್ ಸೆಲುತ್ತಿಡುವಾರ್।।ಅ.ಪ.।। ಪದ್ಮತ್ತಿಲ್ ಉದಿತ್ತವಳಾಂ ಪಾಂಗಾಯುಂಸೀರ್ಮಾದು। ಪದ್ಮದಳ ನೇತ್ತಿರತ್ತಿಲ್ ಪಾರ್ವೈ ಎಂಗುಂ ತೋನದು। ಪದ್ಮಮುಖ ವಿಲಾಸಂ। ಅಮ್ಮನ್ ದೇಗಂ ಬಾಲಸೂರ್ಯ ಪ್ರಕಾಶಂ ವಿಲಾಸಂ। ನೆತ್ತಿಮೇಲ್ ತಿಲಕಂ ಡಾಲ್ ಎನ್ರು ಜ್ವಲಿಕ್ಕುದು।।1।। ಪತ್ತಿರೈ ಮಾತ್ತು ಪೋಲೆ ತಂಗನಿರ ಮೇನಿಯಾಂ। ಬಾಲಸೂರ್ಯ ಇದಯಂ ಪೋಲೆ ಮಿಗಪ್ರಕಾಶಂ ಪಂತಿಯಾನ ಪಲ್‌ವರುಸೈ ಮುತ್ತುಗಳಿನ್ ಸಾಕ್ಷಿಯಾಂ। ಪವಳತ್ತೈ ಪಳಿತ್ತಿಡುಂ ಆಧಾರತ್ತಿಲ್ ನೇರ್ತಿಯಾಂ। ಜ್ಯೋತಿವೆಗು ಜ್ಯೋತಿ। ಸೊಲ್ಲವೆಗು ನೇರ್ತಿ। ರಾಜಲಕ್ಷ್ಮಿ ಕೀರ್ತಿ। ಜಗತ್ತಿಲ್ ಪ್ರಖ್ಯಾತಿ ಇಂದ।2।। ಸರ್ವಾಭರಣಂ ಅಲಂಕರಿತ್ತ ಹಾರಮೋಡು ಪದಕ್ಕಂ। ಜಡಸಿಂಗಾರಂ ಸಿಟ್ಟಿಪಟ್ಟಂ ಸಿರಸಿನಿಲ್ ವಿಳಂಗ। ಅಭಯಹಸ್ತಂ ತಾರುಂಕೈಯಿಲ್ ಮುದ್ದಿರೈ ಮೋದಿರಂ ಮಿನ್ನ। ವಂಕಿಯುಡನ್ ಕಂಕಣಮುಂ ವಜ್ರವಳೆಯಲ್ ಮಿನ್ನ। ಕಾರುಣ್ಯಮೂರ್ತಿಯುಡನೈ ದೇವಿ। ನಾಂಗಳ್ ಕಂಡು ಸೇವಿತ್ತಿಡುವೋಂ ವಾರೀರ್। ಶುಕ್ರವಾರಂ ತನಿಯಾಯ್। ವಂದು ಪಾರೀರ್।।3।।

ಗೊರವನ ಹಳ್ಳಿಯ ಮಾತೆ **ರಾಗ: ಷಣ್ಮುಖಪ್ರಿಯ, ಆದಿತಾಳ**

ಗೊರವನ ಹಳ್ಳಿಯ ಮಾತೆ ಶ್ರೀ ಮಹಾಲಕ್ಷ್ಮಿಯೇ। ಕಮಲಮ್ಮನ ರೂಪದಲಿ ದರುಶನ ನೀಡುವೆ। ಕರುಣಿಸಿ ಸರ್ವರ ಸೇವೆ ಸ್ವೀಕರಿಸಮ್ಮ। ಕರಗಳ ಮುಗಿದು ವರ ಬೇಡುವರಮ್ಮ।।ಪ।। ನಾನಾ ದೇಶಗಳಿಂದ ನಂಬಿ ನಿನ್ನಡೆಗೆ ಬರುವ। ಭಕ್ತರು ಕಾತುರರಾಗಿ ಬಳಲಿ ಬಂದವರಿಗೆ। ಪಾನಪನಿವಾರವಿತ್ತು ದಾಹವ ತಣಿಸಿ ನೀ। ಅನ್ನ ಸಂತರ್ಪಣೆಯಿಂದ ಆನಂದ ತುಂಬುವೆ।।1।। ಕನ್ನಿಕೆಯರಿಗೆ ಮಾಂಗಲ್ಯ ಭಾಗ್ಯವ ನೀಡಿ। ಅರಿಶಿನ ಕುಂಕುಮ ಬಳೆ ಹರಸಿ ನೀ ನೀಡುವೆ। ಸರ್ವರಿಗೂ ಸೌಭಾಗ್ಯ ಸ್ಥಿರವಾಗಿರಲೆಂದು। ಕುಕ್ಕೆಸ್ವಾಮಿ ಮಾತೆ ನೀನು ಉಡಿ ತುಂಬಿ ಹರಸುವೆ।।2।।

ಜನನಿ ನಿನ್ನಯ ಪಾದ **ರಾಗ: ಆನಂದಭೈರವಿ, ಆದಿತಾಳ**

ಜನನಿ ನಿನ್ನಯ ಪಾದ ಜಲಜ ಪೂಜಿಪೆನಮ್ಮ ವನಜಾಕ್ಷಿ ನಾಮಗಿರಿ।।ಪ।। ಸನಕಾದಿ ಸಕಲ ಸನ್ಮುನಿಜನ ಸೇವಿತೆ। ಮನದ ಕೋರಿಕೆ ಇತ್ತು ಮನ್ನಿಸಿ ಸಲಹೆಮ್ಮ।।ಅ.ಪ.।। ಕ್ಷೀರಸಾಗರಪುತ್ರಿ ಸಾರಸ ದಳನೇತ್ರಿ। ಚಾರು ಚಂದಿರ ವದನೆ। ಕಾರುಣ್ಯಾಂಕಿತ ನಿಜ ವಾರೆನೋಟದಿ। ಸರ್ವ ದಾರಿದ್ರ್ಯವಳಿದು ಧನಧಾನ್ಯ ಸುರಿವುದು।।1।। ನೀಳಕುಂತಲೆ ಕಮಲಾಲಯೆ ಚಾರುಲೀಲೆ। ಲಾಲಿತ ಕವಿಚರಣೆ। ಬಾಲನ ಮೊರೆಯನು ಲಾಲಿಸಿ ಕರುಣದಿ। ಪಾಲಿಸೆನ್ನನು ದೇವಿ ಪದುಮವಾಸಿನಿ ಜಗ।।2।। ಕೋಮಲಾಂಗಿಯೆ ಮತ್ತ ಕೋಕಿಲ ಮೃದುವಾಣಿ। ಹೇಮನೂಪುರ ಚರಣೆ। ವಾಮಾ ಕುಂಕುಮ ಶೋಭೆ ಸೋಮಾರ್ಕ ನಿಟಿಲೆ। ಶ್ರೀ ನಾಮಗಿರಿ ಪ್ರಿಯೆ ನರಹರಿ ರಾಣಿ।।3।।

ದೀಪಲಕ್ಷ್ಮೀ ದೇವಿ ಜಯ **ರಾಗ: ಜಯಂತಶ್ರೀ**

ದೀಪಲಕ್ಷ್ಮೀ ದೇವಿ ಜಯ ದೀಪಲಕ್ಷ್ಮೀ। ಶುಕ್ರವಾರದಲ್ಲಿ ನಿನ್ನ ಕೀರ್ತನೆಯ ಗೈಯುವೆ। ಭಕ್ತಿಯಿಂದ ನಮಿಸುವೆ। ಮುಕ್ತಿ ಸಂಪದವ ನೀಡು।।1।। ನಿನ್ನನ್ನೆ ಪಾಡುವೆ ನಿನ್ನನ್ನೇ ಪೊಗಳುವೆ। ನಿನ್ನ ಚರಣದಲ್ಲಿ ಶಿರವನಿಟ್ಟು ನಾ ನಮಿಸುವೆ। ನಿನ್ನ ಕೃಪಾಕಟಾಕ್ಷವು ನನ್ನದಾಗಿ ಬೆಳಗುತಿರಲಿ।।2।। ಅಜ್ಞಾನದ ಕತ್ತಲಲ್ಲಿ ಜೀವನ ಹಸನಾಗಿಸುವ ಅಭಯವ ನೀಡು ಬಾ ಕರುಣೆಯ ತೋರು ಬಾ। ಎಂದೆಂದು ನನ್ನ ಮನಸೂ ನಿನ್ನಲ್ಲಿರಿಸು ತಾಯೆ।।3।।

ದೇವಿ ಲಕ್ಷ್ಮೀ ಮಾಂ ಪಾಹಿ **ರಾಗ: ಮಾಂಡ್**

ದೇವಿ ಲಕ್ಷ್ಮೀ ಮಾಂ ಪಾಹಿ। ದೀನದಯಾಪರಿ ಮಾಂ ಪಾಹಿ।।ಪ।। ಜಯವಿಜಯ ಲಕ್ಷ್ಮೀಯೇ ಮಾಂಪಾಹಿ ಧನಧಾನ್ಯ ಲಕ್ಷ್ಮೀಯೇ ಮಾಂಪಾಹಿ।।1।। ಕ್ಷೀರಾಬ್ಧಿ ತನಯೇ ಮಾಂಪಾಹಿ। ಸರ್ವಮಂಗಳೆ ಮಾಂಪಾಹಿ।।2।। ಕ್ಷೀರಾಬ್ಧಿಶಯನ

ನಾರಾಯಣ। ನಾರಾಯಣ ಲಕ್ಷ್ಮೀ ನಾರಾಯಣ। ನಾರಾಯಣ ಶ್ರೀಮನ್ನಾರಾಯಣ। ನಾರಾಯಣ ಸತ್ಯ ನಾರಾಯಣ॥3॥

ಧಾನ್ಯದ ಲಕ್ಷ್ಮೀಯ ದೈನ್ಯದಿಂ ಕುಳ್ಳಿರಿಸಿ **ರಾಗ: ಷಣ್ಮುಖಪ್ರಿಯ, ಆದಿತಾಳ**

ಧಾನ್ಯದ ಲಕ್ಷ್ಮೀಯ ದೈನ್ಯದಿಂ ಕುಳ್ಳಿರಿಸಿ। ಶ್ರೀ ಧನಲಕ್ಷ್ಮೀಗೆ ಶೃಂಗಾರವನೆ ಮಾಡಿ। ಶ್ರೀರಮಣ ಸಹಿತ ವರಗಳನು ಬೇಡಿ॥ಪ॥ ಸಂತಾನ ಲಕ್ಷ್ಮೀಗೆ ಸಂಪಿಗ್ಹೂವಿನಹಾರ ಸೌಭಾಗ್ಯ ಲಕ್ಷ್ಮೀಗೆ ಸಣ್ಣಜಾಜಿಯ ಮುಡಿಸಿ। ಸೌಂದರ್ಯಲಕ್ಷ್ಮೀಗೆ ಸರ್ವಉಪಚಾರ ಮಾಡಿ। ಐಶ್ವರ್ಯಲಕ್ಷ್ಮೀಯ ಆಶೀರ್ವಾದ ಪಡೆದು॥1॥ ಅಷ್ಟಲಕ್ಷ್ಮೀಯ ಪೂಜೆ ಭಕ್ತಿಯಿಂದ ಮಾಡಿದರೆ ಕಷ್ಟಗಳು ಪರಿಹಾರ ಇಷ್ಟಾರ್ಥ ಸಿದ್ಧಿಯು। ಕಪಿಲಾ ನಾಯಕನು ಮಹಾ ಕರುಣದಿಂದಲಿ ಪೊರೆವ ಎಮ್ಮನು ಮುದ್ದು ಮಹಾಲಕ್ಷ್ಮೀ॥2॥

ಪದುಮಾಸನಿ ಪಾಲಿಸೆ ನೀ **ರಾಗ: ಹಿಂದೋಳ**

ಪದುಮಾಸನಿ ಪಾಲಿಸೆ ನೀ॥ಪ॥ ಪದುಮಾಕ್ಷರಾಣಿ ಪನ್ನಾಗವೇಣಿ। ಮಧುವೈರಿ ಪಾದಾಂಬುಜ ಮೋಹಿನಿ॥ಅ.ಪ.॥ ಗಾನಲೋಲೆ ತಾಯೆ ದೀನಮಾನವನ ಮನಸ್ಸಿನ ಬಂಧನ ಬಿಡಿಸಿಕಾಯೆ ಮುನ್ನ॥1॥ ಭಾನುಕೋಟಿಭಾಸೆ ನ್ಯೂನವೆಲ್ಲ ಕ್ಷಮಿಸೆ ಸೋಮಮುಖಿ ಸುಹಾಸೆ ಮಾನಿನಿ ಸುವೇಷೆ॥2॥ (2ನೇ ಕಾಲ) ಕಮಲಾಸನನುತೆ ಕಮಲೋದ್ಭವನುತೆ ಕಮಲೇ ಕಮಲಜ ಜನನಿಹಿತೆ। ಕಮಲಜೆ ಕಮಲಸಂಭವನುತೆ ಸರಸಿಜೆ। ಕಮಲ ಸುಕೋಮಲೆ ಸುಮವದನೆ। ಸುಮಸಮ ಸುಮಧುರೆ ಸುರಕಿನ್ನರ ನಮಿತೆ। ಪದುಮಜೆ ಪದುಮದಳಾಕ್ಷಣೆ ಪದುಮದಳೇಕ್ಷಣೆ ಪರತರಪಾವನೆ ಪಂಕಜೆ॥3॥

ಪರಮಪಾವನೆ ಲಕ್ಷ್ಮೀ ಬಾರೆ **ರಾಗ: ಅಭೇರಿ, ರೂಪಕತಾಳ**

ಪರಮಪಾವನೆ ಲಕ್ಷ್ಮೀ ಬಾರೆ ದಯತೋರೆ ಸಮನ್ಯಾರೆ ಯದುಗಿರಿ ವರನಿಲಯೆ॥ಪ॥ ಕಾಮನ ತಾಯೆ ಕಂಸಹರನ ಪ್ರಿಯೆ। ರುಕ್ಮಿಣಿ ದೇವಿಯೆ ಕಾರುಣ್ಯ ನಿಧಿಯೆ। ಕೃಷ್ಣನಪ್ರಿಯೇ ಲಕ್ಷ್ಮೀ ಬಾರೆ ದಯತೋರೆ॥1॥ ಇಂದ್ರ ದೇವೇಂದ್ರನ ಮೊರೆಯನು ಕೇಳಿ ಚಂದದಿ ನಹುಷನ ಗರ್ವ ಭಂಗವ ಮಾಡಿ ಇಂದ್ರ ಪದವಿಯನಿತ್ತ ದೇವಿ ದಯತೋರೆ॥2॥ ಕ್ಷೀರಸಾಗರ ಕನ್ಯೆ ಸರಸೀರುಹಾಕ್ಷಿಯೆ ಸಹಸಿಜನಾಭನ ಭಂಗವ ಮಾಡಿ ಇಂದಿರೆ ಭೋಗವನಿತ್ತೆ ದೇವಿ ದಯತೋರೆ॥3॥ ಯಾದವಗಿರಿವಾಸೆ ಮಾಧವನರಾಣಿ। ಮಧುಸೂದನ ಪ್ರಿಯೆ ಪಾದಸೇವೆಯ ಕೊಟ್ಟು ಆದರದಿಂ ದೇವಿಬಾರೆ ದಯತೋರೆ॥4॥

ಪಾಲಿಸೆ ಪಂಕಜನಾಭನ ರಾಣಿ **ರಾಗ : ಮಧ್ಯಮಾವತಿ**

ಪಾಲಿಸೆ ಪಂಕಜನಾಭನ ರಾಣಿ। ಪಾಲಿಸೇ ಗುಣಮಣಿ ಫಣಿವೇಣಿ॥ಪ॥ ಪಾಲಿಸೆನ್ನ ಪದ್ಮಾಲಯಸದಯೇ। ನೀಲವೇಣಿ ನವಪಂಕಜ ಪಾಣೀ। ಬಾಲ ಚಂದ್ರನಿಭಾ ಪಾಲಿಸು ಶೀಲೇ। ಪಾಲಿಸೆನ್ನ ನಿಗಮಾಗಮವಿನುತೇ॥1॥ ಇಂದೀವರಾಕ್ಷಿ ಶ್ರೀವರಲಕ್ಷ್ಮೀ। ಸುಂದರಿ ಸದಾನಂದಕಟಾಕ್ಷಿ। ಕುಂದಕುಸುಮಾ ಕೂಟದಿಂದರಿಭರದನೇ। ಮಂದಹಾಸ ರುಚಿ ಸುಂದರ ವದನೇ। ಮಂದಲಾಂಧ್ರಿತರಾ ಹೃದಯದೊಳ್ ಬೇಡುವೆ ಭಕ್ತಿಯಿಂ ನಿನ್ನನು॥2॥ ಭಾಮಾಮಂಡಲ ಮಣಿಮಂಜುಳ ವಾಣೀ। ಕಾಮಾದಿ ಕರಾರ್ಚಿತ ಕಲ್ಯಾಣಿ। ಸಾಮಜಗಾಮಿನಿ। ತಾಮಸ ಹಾರಿಣಿ। ಕಾಮಜನನಿ ಕಲಿಕಲ್ಮಶನಾಶಿನಿ। ಕಾಮಿತಾರ್ಥಮಿತ್ತೆನ್ನನು ಕಾಯೇ। ಕೋಮಲಾಂಗಿ ಕರುಣಾಲಯೆ ತಾಯೇ॥3॥

ಪೂಜೆ ಮಾಡಿದರು ರಾಜಿಪೊ ಲಕ್ಷ್ಮೀಯು **ರಾಗ: ಆನಂದಭೈರವಿ**

ಪೂಜೆ ಮಾಡಿದರು ರಾಜಿಪೊ ಲಕ್ಷ್ಮೀಯು॥ಪ॥ ಪೂಜೆಗೈದರು ಸೋಜಿಗದವರು। ರಾಜತೇಜದಿ ರಾಜಮುಖಿಯರು॥ಅ.ಪ.॥ ಕಂಬುಕಂಠೇರು ಮೊದಲು ಮೋದದಿಂ। ತಾಂಬೂಲವನ್ನು ತುಂಬಿ ವಟ ಪತ್ರದಿ। ಶೃಂಗರಿಸುತ ಒಂದು ಜಲತಾರದಿ। ಶೃಂಗಾರಮುಖಿಯರು ಸಂಗೀತವ ಪಾಡಿ। ಕಂಗೊಳಿಪೋ ಶ್ರೀ ರಂಗನರಸಿಯ॥1॥

ಮೊಲ್ಲೆ ಮಲ್ಲಿಗೆಯಿಂ ಪಾದರಿ ಸೊಂಪುಳ್ಳ ಸಂಪಿಗೆಯಿಂ। ಚೆಲ್ಲದೀ ಹೊನ್ನ ಸಲ್ಲಲಿತ ಜಾಜಿಯಿಂ। ಪುಲ್ಲಜಕಣೆಂದು ಅಲ್ಲಿ ಕೂಡಿದ। ಬಲ್ಲ ಜಾಣೆಯರೆಲ್ಲ ಸೇರುತ॥2॥ ಭೂರಿ ಭಯಭಕ್ತಿಯಿಂ। ಸಾಗರಸುತೆ ಸಮ್ಮೇಳದ್ವನಿ ಇನಿಯಿಂ। ಕೋರಿಕೆಗಳ ನೀಡೇರಿಸೆನುತಲಿ। ಚೋಳಪುರಾಧೀಶನ ಪ್ರೇಮದರಸಿಯ॥3॥

ಬಾ ತಾಯಿ ಬಾ ಲಕ್ಷ್ಮೀ **ರಾಗ: ಕಾನಡ**

ಬಾ ತಾಯಿ ಬಾ ಲಕ್ಷ್ಮೀ ಬಾ ಬಂದೆಮ್ಮ ಬಂಧನವ ನೀ ಬಿಡಿಸು ಬಾ॥ಪ॥ ಚಂಚಲವ ಬಿಡಿಸಿ ಶಾಂತಿಯನು ತೊಡಿಸಿ ಸಿರಿರಮಣನಪಾದ ನೀತೋರು ಬಾ॥ಅ.ಪ॥ ಸರಸಿಜ ನಯನೆ ಸರಸದಿ ಬಾ ದುರಿತ ನಿವಾರಿಣೆ ತ್ವರಿತದಿ ಬಾ ಚರಣವ ನಂಬಿಹೆ ಕರುಣಾಳು ಬಾ ಪರಮ ಪಾವನೆ ದೇವಿ ವರಲಕ್ಷ್ಮೀ ಬಾ॥1॥ ಹೆಜ್ಜೆಯ ಗೆಜ್ಜೆರವ ಕುಲುಕುತ ಬಾ ಸಜ್ಜನರ ಮನವನು ತಣಿಸುತ ಬಾ ಶ್ರಾವಣ ಶುಕ್ರವಾರದ ಸಂಜೆಯಲಿ ಸಂಭ್ರಮದಿ ಸಂತಸದಿ ಬಾ॥2॥

ಬಾರಮ್ಮ ಸೌಭಾಗ್ಯದ ನಿಧಿಯೇ **ರಾಗ: ಖರಹರಪ್ರಿಯ**

ಬಾರಮ್ಮ ಸೌಭಾಗ್ಯದ ನಿಧಿಯೇ। ಬಾರೇ ಲಕ್ಷ್ಮೀ ದೇವಿಯೇ॥ಪ॥ ಗೆಜ್ಜೆ ಕಾಲ್ಗಡಗವಿಟ್ಟು ಹೆಜ್ಜೆಯನ್ನೆ ಕೂಡಿಸಿ। ಸಜ್ಜನಾಳಿ ಮೋಹದಿಂದ ಪೂಜ್ಯಳೇ ಬಾರಮ್ಮ॥1॥ ಶುಕ್ರವಾರದ ರಾತ್ರಿಯಲ್ಲಿ ಭಕ್ತರೆಲ್ಲರು ಸೇರಿ ನಿಂತು ಭಕ್ತಿಭಾವದಿಂದ ಭಜಿಸಿ। ಮುಕ್ತಿ ಮಾರ್ಗವ ಬೇಡಿಕೊಂಬರು॥2॥ ನಿನ್ನ ನಂಬಿದಂಥ ಜನರು ಮುನ್ನ ಬಹಳ ಧನ್ಯರು। ನಿನ್ನ ಕಾಂಬ ಮಾನವರು ಪನ್ನಗಶಯನನ ಕಾಂಬರು॥3॥

ಬಾರೇ ಸೌಭಾಗ್ಯದ ನಿಧಿಯೆ **ರಾಗ: ಮಧ್ಯಮಾವತಿ**

ಬಾರೇ ಸೌಭಾಗ್ಯದ ನಿಧಿಯೆ। ಭಾಗ್ಯಾದ ಲಕ್ಷ್ಮಿ ಬಾರೆ॥ಪ॥ ಕಮಲದಲ್ಲಿ ಜನಿಸಿ ಕಮಲಾಕ್ಷಿ ಎಂದೆನಿಸಿ। ಕಸ್ತೂರಿ ತಿಲಕವ ಇರಿಸಿ ಭಕ್ತರ ಕಷ್ಟವ ಹರಿಸಿ॥1॥ ಮುತ್ತಿನ ಮಂಟಪ ರಚಿಸಿ। ಅರ್ತಿಯಿಂದಲಿ ಕರೆವೆನಾ। ಅಂಬುಜಾಕ್ಷಿಯೆ ನೀ ಬಾರೇ। ಕ್ಷೀರಸಾಗರ ತನಯೆ॥2॥ ನೀನಿರುವಾ ಸ್ಥಳವೆಲ್ಲಾ ವೈಕುಂಠಕೆ ಸಮನಮ್ಮ। ನಿಮ್ಮಯ ಸೇವೆಯೊಳಿರುವಾ ಜನರೇ ಧನ್ಯರು॥ ತಾಯೆ॥3॥

ಬಂದಳಮ್ಮ ಬಂದಳು ಮಹಾಲಕ್ಷ್ಮೀ **ರಾಗ:ಸುನಾದವಿನೋದಿನಿ**

ಬಂದಳಮ್ಮ ಬಂದಳು ಮಹಾಲಕ್ಷ್ಮಿ ಬಂದಳು। ಸುಂದರಾಂಗಿ ಸಂಭ್ರಮದಿ ಕರೆಗೋಡುತ ಬಂದಳು॥ಪ॥ ತುಂಬು ನಗೆಯ ಬೀರುತ ಮಂದಹಾಸ ತೋರುತ। ಇಂದುವದನೆ ಕುಂದರದನೆ ಮಮತಾಮಯಿ ಬಂದಳು॥1॥ ಮುತ್ತಿನೋಲೆ ಒಡ್ಯಾಣ ಕರದಲ್ಲಿ ಕಂಕಣ। ಕಾಲಂದುಗೆ ಝುಣಝುಣ ಎನಿಸುತ್ತಾ ಬಂದಳು॥2॥ ಹಣೆಯಲ್ಲಿ ಕುಂಕುಮ ಮೈಯಗಂಧ ಘಮಘಮ ಮುಡಿಯಲ್ಲಿ ಒಪ್ಪುವ ಸುಮ ಶಾರದೆ ಸನ್ನುತೆ ಬಂದಳು॥3॥

ಭಾಗ್ಯತ್ತು ಲಕ್ಷ್ಮಿವಾರುಂಮಮ್ಮ (ತಮಿಳು) **ರಾಗ: ಶ್ರೀ**

ಭಾಗ್ಯತ್ತು ಲಕ್ಷ್ಮಿವಾರುಂಮಮ್ಮ। ಅಮ್ಮಮ್ಮಾ ಸೌಭಾಗ್ಯತ್ತು ಲಕ್ಷ್ಮೀ ವಾರುಂಮಮ್ಮ॥ಪ॥ ಮರಕತ ಪಚ್ಚೈ ಸೇಲೈ ಉಡುತ್ತು। ಮಾಂಗಲ್ಯಮುಂ ಮಾರ್ಬಿಲ್ ಅಣೆಂದು॥ ನಲ್ಲ ಮಾಣಿಕ್ಯ ಪದಕಮುಂ ಪೂಟಿ। ಮಹಲಕ್ಷ್ಮಿಯಾಯ್ ವರಣುಂಮಮ್ಮ॥1॥ ಮುಗತ್ತಿಲ್‌ನಲ್ಲ ಪಸುಮಂಜಲ್ ಸಿಳಂಗ। ನೆತ್ತಿಯಿಲ್ ಕುಂಕುಮ ಪೊಟ್ಟು ವಿಳಂಗ॥ ತನಿವೂರುಂ ಕಂಗಳಾಯ್ ಎಂಗಳೈ ಕಾಕುಂ। ಕಾತ್ಯಾಯಿನಿಯಾಯ್ ವರಣುಂಮಮ್ಮ॥2॥ ಕಲಕಲಎನ್ರು ಕಾಲ್ಗಳಿಲ್ ಗೊಲುಸು। ಡಿಗಿಡಿಗಿ ಎನ್ರು ತಂಗವೊಡ್ಯಾಣಂ॥ ಜಿಗಿಜಿಗಿ ಎನ್ರು ತಂಗ ಕಿರೀಟಮುಂ। ತೇಜೋಮಯಿಯಾಯ್ ವರಣುಂಮಮ್ಮ॥3॥ ಜಿಗಿ ಜಿಗಿ ಎನ್ರು ನಗೈಯೆಲ್ಲಾಂ ತಿಳಂಗ। ಜಿಗಿಜಿಗಿ ಎನ್ರು ಜಗಮೆಲ್ಲಾಂ ವಿಳಂಗ॥ ಜಗದೋದ್ಧಾರಣೆ ಮಾತೆ ನೀಯುಂ। ಜಗಜ್ಜನನಿಯಾಯ್ ವರಣುಂಮಮ್ಮ॥4॥ತಾಯೆ ಉನ್ನೈ ಅಳೈಕ್ಕವೆ ನಾಂಗಳ್। ಭಕ್ತಿಯುಡನ್ ಪದಂಗಳ್ ಫಣೆಂದೋಂ। ಪರಿಯುಡನೇ ನೀ ವಂದಮರ್ದುಂ। ಪಾಶತ್ತುಡ್‌ನೆಲ್ಲಾಂ ಏತ್ತಿಡವೇಣುಂ॥5॥

ಭಾಗ್ಯದ ಲಕ್ಷ್ಮಿ ಮನೆಗೆ ಬಂದಳು — ರಾಗ: ಅಭೇರಿ

ಭಾಗ್ಯದ ಲಕ್ಷ್ಮಿ ಮನೆಗೆ ಬಂದಳು। ಬಾಗಿಲ ತೆಗೆಯಿರೆ। ಯೋಗ್ಯವಾದ ಜನರೆಲ್ಲಾ। ವರವ ಬೇಡಿರೆ। ॥ಪ॥ ಶಿರಸ್ಸಿನಲ್ಲಿ ಧರಿಸಿದಳು ರತ್ನಕ್ಯಾಧಿಗೆ। ಸಪ್ತಕಳಶ ಮುತ್ತಿನ ಬುಗುಡಿ ಚಂದ್ರ ಮರುವನು। ಮೂಗಿನಲ್ಲಿ ಇಟ್ಟಳಮ್ಮ ಮುತ್ತಿನ ಮುಕುರವ। ತೋಳಿನಲ್ಲಿ ಇಟ್ಟಳಮ್ಮ ಬಾಜಬಂದಿಯ॥1॥ ಅಂದವಾದ ನಡುವಿಗೆ ಚಿನ್ನದ ಡಾಬನು। ಆನಂದವಾದ ಕಸ್ತುರಿ ತಿಲುಕ ಫಣೆಯೊಳೊಪ್ಪುತ॥ ಚಲವು ಜನಕೆ ಉಟ್ಟು ಬಂದಳು ಸರಿಗೆ ಸೀರೆಯಾ। ಕನ್ಯ ಲಕ್ಷ್ಮೀ ತೊಟ್ಟಳಮ್ಮ ಬಣ್ಣದ ರವಿಕೆಯ॥2॥

ಯಾರೇ ರಮೆಯ ಯಾರೇ ಲಕ್ಷ್ಮೀಯ — ರಾಗ: ಹಿಂದೋಳ, ಆದಿತಾಳ

ಯಾರೇ ರಮೆಯ ಯಾರೇ ಲಕ್ಷ್ಮೀಯ। ಯಾರೇ ರುಕ್ಮಿಣಿಯ ಕರೆಯಬಂದವರು॥ಪ॥ ಬರಿಪಾಲ್ ಬೆಣ್ಣೆಯನೊಲ್ಲಳು ಈಕೆ। ಕ್ಷೀರಾಬ್ಧಿ ಕನ್ನಿಕೇ ರಾಜಕನ್ನಿಕೇ। ಹೋಳಿಗೆ ಮಂಡಿಗೆ ಚಿತ್ರಾನ್ನಪಾಯಸ। ನಿತ್ಯ ನೈವೇದ್ಯ ಈ ನಿಧಿಗೆ॥1॥ ಭಕ್ತರಧೀನೆ ಭಾಗವತ ಪ್ರಿಯೆ। ಅರ್ಚಿಸಿ ಪೂಜಿಸಿ ನೋಡಬನ್ನಿ। ಇಂದುವದನೆಯ ಮೀನಲೋಚನೆಯ। ಅನುಪಮ ಸುಂದರಿಯ ನಿರುಪಮೆಯ॥2॥ ಸಿರಿಯಲಿ ಶ್ರೀದೇವಿ ಸಹನೆಯಲಿ ಭೂದೇವಿ। ಲಾವಣ್ಯ ಮೂರುತಿ ರಮ್ಯೆ। ವಾತಾಲಪುರಧೀಶ ಕೃಷ್ಣನ ಪಟ್ಟದರಸಿ। ಒಲಿದು ನಮ್ಮನೆಗೆ ನಡೆದುಬಾರಮ್ಮ ತಾಯೆ॥3॥

ಲಕುಮಿಯ ನೆನೆಯದ ನಾಲಿಗೆ ಏಕೋ — ರಾಗ: ತೋಡಿ, ಆದಿತಾಳ

ಲಕುಮಿಯ ನೆನೆಯದ ನಾಲಿಗೆ ಏಕೋ। ವರ ಲಕುಮಿಯ ನೆನಯದ ನರಜನ್ಮವೇಕೋ॥ಪ॥ ಕಾಮಧೇನುವಿನಂಥ ಮಾತೆ ತಾನಿರಲು। ಮೇಕೆಯ ಮರಿಯನು ನೆನೆವುದೇಕೋ। ಕೋರಿದ ವರಗಳ ನೀಡುವ ತಾಯಿಯ। ಮರೆಯುತೆ ಮನುಜರು ತೊಳಲುವುದೇಕೋ॥1॥ ಊರ್ಧ್ವ ಕರಗಳೊಳು ಪದುಮವ ಪಿಡಿದೂ। ಪಾರ್ಶ್ವದ ಕರದಲ್ಲಿ ಧನವನು ಸುರಿದೂ। ಅಭಯವ ತೋರುವ ಕೈಯನು ನೋಡೋ। ನಲಿಯುತೆ ಕುಣಿಯುತೆ ತಣಿಯಿರೋ ತೊಳಲುವಿರೇಕೋ॥2॥ ನಾರದ ಜನಕನ ಜನನಿಯ ನೋಡೋ। ನಾರಾಯಣನಾ ನೀರಜೆಕಾಣೋ। ಲೋಕದ ಜನರ ನೋವನು ಮರೆಸುತೆ। ಶೋಕನಿವಾರಿಪ ಮಾತೆಗೆ ನಮಿಸೋ॥3॥

ಲಕ್ಷ್ಮೀದೇವಿ ಬಾರೆ ಮಾತೆ — ರಾಗ: ಆನಂದಭೈರವಿ

ಲಕ್ಷ್ಮೀದೇವಿ ಬಾರೆ ಮಾತೆ ಪೂಜಿಸುವೆನು। ನಿನ್ನ ಪಾದಂಗಳನೆ ಬಣ್ಣಿಸುವೆನು ನಾನು॥ಪ॥ ಮರುಗ ಮಲ್ಲಿಗೆ ಸುರಗಿ ಸಂಪಿಗೆ ಕ್ಯಾದಿಗೆ ಪುಷ್ಪ। ನಾನಾ ಜಾತಿ ಪುಷ್ಪಗಳನ್ನು ಅರ್ಚಿಸುವೆನು ನಾನು॥1॥ ಪುಣುಗು ಜವ್ವಾದಿ ಕುಂಕುಮ ಕೇಸರಿ ಗಂಧ ಕಸ್ತೂರಿ। ನಾನಾ ಜಾತಿ ಗಂಧಗಳಿಂದ ಪೂಜಿಸುವೆನು ನಾನು॥2॥ ಕದಳಿ ದಾಳಿಂಬ ನೇರಳೆ ನಾರಿಕೇಳ ಫಲಗಳು। ನಾನಾಜಾತಿ ಫಲಗಳನ್ನು ಸಮರ್ಪಿಸುವೆನು ನಾನು॥3॥ ಮುತ್ತಿನಾರತಿಗಳನ್ನು ಪಿಡಿದು ಬೆಳಗುತೀಗಲೆ। ಬೇಗ ಬಂದು ವರವ ಕೊಟ್ಟು ಪೊರೆಯುತೀಗಲೆ॥4॥

ಲಕ್ಷ್ಮೀದೇವಿ ಭಕ್ತಿಯಿಂದಲಿ

ಲಕ್ಷಿದೇವಿ ಭಕ್ತಿಯಿಂದಲಿ ಪೂಜಿಪೆನಾನು। ನಾನು ನಿಮ್ಮ ಪಾದಗಳಿಗೇ ವಂದಿಪೆಮಾತೆ॥ಪ॥ ಮರುಗಮಲ್ಲಿಗೆ ಸುರಗಿ ಸಂಪಿಗೆ। ಪಾದರೀಪುಷ್ಪ। ನಾನಾ ಜಾತಿಪೂಗಳಿಂದ ಪೂಜಿಪೆಮಾತೇ॥1॥ ಪುನುಗು ಜವ್ವಾಜಿ ಕುಂಕುಮ ಕೇಸರಿ ಗಂಧಕಸ್ತೂರಿ ಗನಸುಗಂಧಗಳನೆ। ಪೂಸೀ ಪೂಜಿಪೇ ನಾನೂ॥2॥ ಕದಳಿದಾಳಿಂಬೆ ನೇರುಳೆ ಚಿದುರಫಲಂಗಳೂ ನಾನಾ ಚಾತಿ ಫಲಗಳಿಂದ ಆರ್ಪಿಸುವೇನೂ॥3॥ ಮುತ್ತೀನಾರತಿಗಳನೆ ತಂದು ಬೆಳಗುವೇನು। ಬೇಗದಿಂದವರವಕೊಟ್ಟು ಪಾಲಿಸೂ ಮಾತೆಯೇ॥4॥

ಲಕ್ಷ್ಮೀಗಿಂತ ದಾತರಿಲ್ಲ **ರಾಗ: ಅಭೇರಿ**

ಲಕ್ಷ್ಮೀಗಿಂತ ದಾತರಿಲ್ಲ। ದೇವಿ ಮಹಿಮೆ ಕೇಳಿರೆಲ್ಲ। ಕ್ಷೀರಸಾಗರದಲ್ಲಿ ಜನಿಸಿ। ಹರಿಯ ವಕ್ಷದಿ ರಾಜಿಸುವಳು॥ಪ॥ ದೇವ ದೈತ್ಯರೆಲ್ಲ ಸೇರಿ। ಕ್ಷೀರಸಾಗರ ಕಡೆಯಲಾಗ। ದಿವ್ಯಪೀಠದಲ್ಲಿ ಕುಳಿತು। ಬಂದ ದೇವಿಯೇ ಇವಳು॥1॥ ನೆರೆದ ಸುರಾಸುರರ ನೋಡಿ। ಯಾರನೊಲ್ಲದೆ ಕಡೆಗೆ ತಿರುಗಿ ಹರಿಯ ರೂಪವ ಕಂಡ ಮೋಹಿಸಿ। ವರಿಸಿ ನಿಂತ ಪರಮಳಿವಳು॥2॥ ಇಂದು ವದನೆ ಕುಂದರದನೆ। ಚಂದ್ರ ಸೋದರಿ ಮಂಗಳಾಂಗಿ। ಕುಂದದೀಪದ ವರವ ಕೊಡುವಳಿಂದು ಪೂಜಿಪೆ ಭಕ್ತಿಯಿಂದ॥3॥

ಲೋಕ ಜನನಿಯೆ ತಾಯೆ **ರಾಗ: ಸಾರಮತಿ, ಏಕತಾಳ**

ಲೋಕ ಜನನಿಯೆ ತಾಯೆ ಕ್ಷೀರಸಾಗರ ಕನ್ಯೆ। ಶ್ರೀಮಹಾಲಕ್ಷ್ಮೀಯೆ ಸರ್ವಮಾನ್ಯೆ ॥ಪ॥ ನಿನ್ನ ಕೃಪೆಯೊಂದಿರಲು ಲೋಕವೆ ನಲಿಯುವುದು। ಸರ್ವಸಂಪದಗಳಿಗೆ ಒಡತಿ ನೀನು। ನೀನು ಮುನಿದರೆ ಸರ್ವಲೋಕವೆ ನಲುಗುವುದು। ನಿನ್ನ ಆಟಿಕೆಯಂತೆ ಲೋಕವೆಲ್ಲಾ॥1॥ ನಿನ್ನ ಸುತ್ತಲೂ ಆಸೆ ಆಮಿಷದಾ ಬಲೆಯಿಹುದು। ಮಾನವತೆ ಮರೆಯಿಸುವ ಪಾಶವಿಹುದು। ಹೆದರುವೆನು ತಾಯೆ ತವ ಮೋಹದ ಆಸೆಗೆ। ತಳ್ಳದಿರು ನಾಶದೆಡೆ ಕರುಣೆ ತೋರು॥2॥ ಎಲ್ಲವೂ ನಿನ್ನದಿರೆ ನಾನು ಕೊಡಲೇನಿಹುದು। ನಾನೆ ನಿನ್ನವಳಂತೆ ಪದ್ಮಾಲಯೆ। ಅದಕೆ ಮಾನಸ ಪೂಜೆ ಅರ್ಪಿಸುವೆ ಭಾರ್ಗವಿಯೆ। ಶ್ರೀಹರಿಯ ಪ್ರಿಯೆ ನೀನು ಸಲಹು ತಾಯೆ॥3॥

ವರ್ಣಿಸಲಾರೆ ಕೊಲ್ಲಾಪುರ ಲಕ್ಷ್ಮೀಯ **ರಾಗ: ಸಾರಂಗ, ತಾಳ**

ವರ್ಣಿಸಲಾರೆ ಕೊಲ್ಲಾಪುರ ಲಕ್ಷ್ಮೀಯ ಕನ್ನೆ ಪದ್ಮಿನಿಯ ಸಹೋದರಿಯಾ॥ಪ॥ ಮಾಧವ ನರಸಿಯಾ। ಪಾದಗಳನುನಾಂ। ಮೋದದಿಂದಲಿ ಪೂಜಿಪೆನೀಗ। ಸಾಧುಜನರ ಸನ್ಮೋಹದಿ ಕಾಯುವ। ರಾಧಪತಿ ಶ್ರೀಹರಿ ಪ್ರಿಯೇ॥1॥ ಭೃಗುಮುನಿ ಹರಿಯನು ಒದೆಯಲು ಕಾಲಿನಿಂ। ಅಧಿಕಕುಪಿತಳಾಗಿ ತಾತಿರುಗಿ ಮಡದಿಯರಿಗೆ। ತಾವರಗಳ ನೀಡುತ। ಸಡಗರದಿಂದಿಹ। ಸತಿಮಣಿಯಾ॥2॥ ನಂದನಕಂದ ಮುಕುಂದ ನರ್ಧಾಂಗಿಯಾ। ಇಂದಿರಾ ಪತಿಗೋವಿಂದನ ಸತಿಯಾ। ತಂದೆ ಶೇಷಾದ್ರೀಶನ ಮೇಲೆ ಕೋಪಿಸಿ ಬಂದು ನೆಲೆಸಿದ ಶ್ರೀಮಹಾಲಕ್ಷ್ಮೀ॥3॥

ವಂದಿಪೆ ಮುಕುಂದಪ್ರಿಯೆ ಕುಂದರವನೆ **ರಾಗ: ನಾಯಕಿ, ರೂಪಕತಾಳ**

ವಂದಿಪೆ ಮುಕುಂದಪ್ರಿಯೆ ಕುಂದರದನೆ ಇಂದುಸಹೋದರಿ॥ಪ॥ ಶರಧಿಮಥನ ವೇಳೆಯಲ್ಲಿ ಕರದಿ ಕಮಲವನ್ನೆ ಪಿಡಿದು। ಭರದಿ ಬಂದೆಯಮ್ಮ ಕರಿರಾಜಗಮನೆ ಶ್ರೀಲಕ್ಷ್ಮೀ॥1॥ ಲೋಕವಂದಿತೆ ಲೋಕಮಾತೆ ಲೋಕಖ್ಯಾತೆ ಲೋಕಸುಂದರಿ। ಲೋಕ ದಾರಿದ್ರ್ಯಹಾರಿಣೆ ಲೋಕನಾಥನ ಪ್ರಿಯೆ॥2॥ ಕಮಲವಂದಿತೆ ಕಮಲಹಸ್ತೆ ಕಮಲಾಕ್ಷಿ ಕಮಲಸುಂದರಿ। ಕಾಮಜನನಿ ಕೃಪೆಯ ಮಾಡು ಕಮಲನಾಭನ ಪ್ರಿಯೆ॥3॥ ಧರೆಯೊಳ್ ಅಧಿಕ ಕೊಲ್ಹಾಪುರದೊಳಗೆ ನೆಲೆಸಿ ಇರುವೊ। ಪರಮ ಪುರುಷ ಶ್ರೀನಿವಾಸನ ಅರಸಿಯನ್ನು ಸರಸಿಯಂದದಿ॥4॥

ಶ್ರೀಲಕ್ಷ್ಮೀ ಪಾಲಿಸು ಸಿಂಧು **ರಾಗ: ಶ್ರೀ**

ಶ್ರೀ ಲಕ್ಷ್ಮೀ ಪಾಲಿಸು ಸಿಂಧು ರಾಜಸುತೆ। ಸುರಾರ್ಚಿತೆ ಶುಭಾನ್ವಿತೆ। ಶ್ರೀಲಕ್ಷ್ಮೀ ಪಾಲಿಸು ಸಿಂಧು ರಾಜಸುತೆ॥ಪ॥ ದೇವ ಮುನಿಕುಲ ವಿನುತೆ ಭವಭಾವ ವಿಧಿ ಮಾತೆ। ಪಾವನೋಜ್ವಲ ಚರಿತೆ ಪಾಪಹಾರಿಣಿ ಲಲಿತೆ। ಸೇವಕ ಜನ ಪರಿಪಾಲಿನಿ ಭಾವುಕ ಫಲ ಸಂದಾಯಿನಿ॥ 1॥ ಚಾರು ನೀರಜ ಪಾಣಿ ಶಂಕರಿ ಶುಭವೇಣಿ ಸಾರ ಕೋಕಿಲ ವಾಣಿ ಸಾಧುನುತೆ ಕಲ್ಯಾಣಿ। ಭೂರಿ ಕೃಪಾಕಲ್ಲೋಲಿನಿ। ಭುವನಜನಾವನ ಜನನಿ॥2॥

ಶ್ರೀಲಕ್ಷ್ಮೀ ಉನ್ನೈನಂಬಿನೇನ್ (ತಮಿಳು) ರಾಗ: ತಿಲಂಗ್, ಆದಿತಾಳ

ಶ್ರೀ ಲಕ್ಷ್ಮೀ ಉನ್ನೈನಂಬಿನೇನ್ ಸಂತತಂ। ಶ್ರೀಪುರಲಕ್ಷ್ಮೀ ನೀಯೇ ಅರುಳ್‌ವಾಯೇ॥ಪ॥ ಸೆಲ್ವಂತರುಂ ಧನಲಕ್ಷ್ಮೀ ಕಾಮಧೇನು ನೀಯೇ। ವರಲಕ್ಷ್ಮೀ ವಿದ್ಯಾಲಕ್ಷ್ಮೀ ವಾಕಿಲ್ ವಳರುಂ ಲಕ್ಷ್ಮೀ॥ಅ.ಪ.॥ ಶ್ರೀಲಕ್ಷ್ಮೀ ಜಯಲಕ್ಷ್ಮಿ ತೇಜೋರ್‌ಮಯಲಕ್ಷ್ಮೀ। ಶ್ರೀರಾಮರ್ ಮನಂಮಗಿಳುಂ ಶ್ರೀ ಸೀತಾಲಕ್ಷ್ಮಿ॥ ಅಸುರನೈ ವದೈಸೈಂದ ಶ್ರೀ ವಾಣಿ ದುರ್ಗೆಲಕ್ಷ್ಮೀ। ಆದಿ ದೇವರುಂ ತೊಳುಂ ಆನಂದಲಕ್ಷ್ಮೀ॥1॥ ಸತ್ಯಧರ್ಮಮಾಯ್ ವಿಳಂಗುಂ ಶ್ರೀ ಶ್ರೀನಿವಾಸಲಕ್ಷ್ಮೀ। ಮಾಧವನ್ ಮನಂ ಮಗಿಳುಂ ಶ್ರೀ ದೇವಿ ಮಹಾಲಕ್ಷ್ಮಿ॥ ದೇವಾದಿ ದೇವರ್ ಪೋಟ್ರುಂ ತಾಯೆ ಶ್ರೀ ಗಜಲಕ್ಷ್ಮೀ। ಮೂವುಲಗೆಲ್ಲಾಂ ಆಳುಂ ದೇವಿ ಶ್ರೀಪುರಲಕ್ಷ್ಮಿ॥2॥

ಶ್ರೀಲಕ್ಷ್ಮೀ ವರಲಕ್ಷ್ಮೀ ಧನಧಾನ್ಯಲಕ್ಷ್ಮೀ ರಾಗ: ಆನಂದಭೈರವಿ

ಶ್ರೀಲಕ್ಷ್ಮೀ ವರಲಕ್ಷ್ಮೀ ಧನಧಾನ್ಯಲಕ್ಷ್ಮೀ। ಸಕಲ ಸಂಪದ ನೀಡು ಸೌಭಾಗ್ಯಲಕ್ಷ್ಮೀ। ಶ್ರೀ ಮಹಾವಿಷ್ಣುವಿನ ಪ್ರಿಯರಾಣಿ ಲಕ್ಷ್ಮೀ। ಸಕಲ ಪಾಣಿನಿ ದೇವಿ ವಿಜಯಲಕ್ಷ್ಮೀ। ವಿಮಲೆ ಸೌಜನ್ಯಮಯಿ ಸಂತಾನಲಕ್ಷ್ಮೀ। ಕೋಮಲೆ ಶ್ರೀರಂಗನಾರ್ಧಾಂಗಿ ಧೈರ್ಯಲಕ್ಷ್ಮೀ। ಮಂಗಳೆಯೆ ಶುಭನೀಡು ಜಗಕೆ ವಿದ್ಯಾಲಕ್ಷ್ಮೀ। ಮಾಂಗಲ್ಯ ಭಾಗ್ಯವನು ನೀಡು ಆದಿಲಕ್ಷ್ಮೀ। ರಂಗನಾ ರಾಣಿಯೇ ಪೊರೆಯೆ ಗಜಲಕ್ಷ್ಮೀ॥

ಸಾಯಂಕಾಲಮು ಸಮಯಮುಲೋ ರಾಗ: ಆನಂದಭೈರವಿ, ಆದಿತಾಳ

ಸಾಯಂಕಾಲಮು ಸಮಯಮುಲೋ ಸಂಧ್ಯಾದೀಪರಾದನಲೋ॥ಪ॥ ವಚ್ಚಿನು ತಲ್ಲಿ ಮಹಾಲಕ್ಷ್ಮೀ। ಇಚ್ಚಿ ವರಮುಲೋ ವರಲಕ್ಷ್ಮೀ॥ಅ.ಪ॥ ಕಾಲುಕು ಗೆಜ್ಜುಲು ಕಟ್ಟಿಂದಿ। ಮೆಡಲು ಸರಮುಲುವೇಸಿಂದಿ। ಪಿಲಚಿನ ವೆಂಟನೆ ವಚ್ಚಿಂದಿ। ಅಡಿಗಿನ ವನ್ನಿ ಇಚ್ಚಿಂದಿ॥1॥ ಧನಮುಲು ಇಚ್ಚಿನ ಧನಲಕ್ಷ್ಮೀ। ಧ್ಯಾನಮುಲು ಇಚ್ಚಿನ ಧಾನ್ಯಲಕ್ಷ್ಮೀ। ವರ ಮುಲು ಇಚ್ಚಿನ ವರಲಕ್ಷ್ಮೀ। ಸಂತಾನ ಮಿಚ್ಚಿನ ಸಂತಾನಲಕ್ಷ್ಮೀ॥2॥ ಅಂದರು ಚೇರಿರಾರಂಡಿ। ಪೂಜೇಲುಬಾಗುಗ ಚೇಯಂಡೀ। ದೇವಿಕಿ ಅರ್ಚನ ಚೇಯಂಡೀ। ದೇವಿ ರೂಪಮು ಚೂಡಂಡೀ ॥3॥ ವಜ್ರಕಿರೀಟಮು ಚೂಡಂಡೀ। ನಾಗಭರಣಮು ಚೂಡಂಡೀ। ದೇವಿಯ ರೂಪಮು ಕನರಂಡೀ। ಅಂದಾರು ಪೂಜಕು ರಾರಂಡೀ॥4॥ ಘಾಲ ಸಮುದ್ರನಿ ಪುತ್ರಿಕದಾ। ಪರಂಧಾಮ ನೀ ಪ್ರಾಣಸಖೀ। ರಾವಮ್ಮ ಇಟುರಾವಮ್ಮ। ಮಮುಕರುಣಿಂಚಗ ರಾವಮ್ಮ॥5॥

ಸಿರಿದೇವಿಯು ಸರಸದಿ ಬಂದಳು ರಾಗ: ಕಾಂಬೋಧಿ

ಸಿರಿದೇವಿಯು ಸರಸದಿ ಬಂದಳು। ಮನೆಗೆ ಸಿರಿಯನ್ನೆ ಸುರಿಸುತ ನಿಂದಳು॥ಪ॥ ಅಂದುಗೆ ಗೆಜ್ಜೆಯು ಘಲು ಘಲುರೆನುತಲಿ। ಸುಂದರ ಪದದಿ ಹೆಜ್ಜೆಯನಿಡುತಲಿ। ಹೊಳೆವ ಪೈಜಣ ಝುಣಕು ಝುಣಕು ಎನೆ। ಮನಮೋಹಿಸುತ ಭಕ್ತರ ಮನೆಗೆ॥1॥ ಹೊನ್ನಹೊಳೆಯನು ಹರಿಸುತ ಬಂದಳು। ಜ್ಞಾನ ಪ್ರಭೆಯನು ತೋರುತ ನಿಂದಳು। ಕೋಟಿ ಸೂರ್ಯರ ತೇಜವ ಮೀರಿಸಿ। ರಾಮನರಸಿಯು ಸೀತಾ ಮಾತೆಯು॥2॥ ಭಾಗ್ಯರಾಶಿಯ ಸುರಿಯುತ ಬಂದು। ಸೌಭಾಗ್ಯದ ನಿಧಿಯ ಉಡಿಯಲಿ ತಂದು। ಕಮಲಲೋಚನೆ ಕಮಲನಾಭನ ಪ್ರಿಯೆ। ಶ್ರೀನಿವಾಸನ ಚಂದ್ರ ಚಕೋರೆ॥3॥ ಶ್ವೇತ ಪೀತಾಂಬರವ ಧರಿಸಿದವಳು। ರತ್ನಖಚಿತ ಮುಕುಟವನ್ನಿಟ್ಟವಳು। ಅರವಿಂದನಯನೆ ಅರುಣೋದಯದಲಿ। ಅರುಣಾಚಲೇಶ ನಿಂದೊಡಗೂಡಿ॥4॥ ಕುಂಕುಮಾಂಕಿತಳು ಪಂಕಜಮುಖಿಯು। ಮೂಗುತಿಧರಳು ಮುಕುತಿಯನೀವಳು। ಕಂಕಣ ಕೈಯಲಿ ಭಕುತರ ಹರಸುತ। ಮುಗುಳು ನಗೆಯಲಿ ಜಗವನು ವರಿಸುತ॥5॥ ಮನದಂಗಳದ ಮಲ್ಲಿಗೆಯಂತೆ । ತಿಂಗಳ ಬೆಳಕಿನ ಚಂದ್ರಮನಂತೆ ಭಕ್ತಿ ಭಾವದಿ ಸೇವೆಗೈವರಿಗೆ। ಕಾಮಧೇನುವೆ ತಾನಾಗಿಹೆನೆಂದು॥6॥ ಕೋಲಾಸುರನ ವಧಿಸಿದವಳು। ವ್ಯಾಘ್ರಪುರ ದಲಿ ನಿಂದವಳು। ಓರೆ (ವಾ) ನೋಟದಿ ವರಗಳ ನೀಡುತ ಉಡುಪೀನಾಥನ ಪ್ರಿಯಕರಳು॥7॥

ಕೀರ್ತನೆಗಳು

ಮತಿಂದೇಹಿ ವರಮಂಗೆ **ರಾಗ: ಕಲ್ಯಾಣಿ, ಆದಿತಾಳ**

ಮತಿಂದೇಹಿ ವರಮಂಗೆ ಶುಭತುಂಗೆ ಮಮ ಸತತ ಕಲ್ಯಾಣಿ॥ಪ॥ ಪತಿತ ಪಾವನೆ ಪಂಕಜ ಚರಣೆ ಪಂಕಜಾಸನೆ ಶಶಿನಿಭವದನೆ। ಪಾಲಿತ ಭುವನೆ ಕರುಣಾಭರಣೆ। ಪರಮ ಪುರುಷ ವಕ್ಷಸ್ಥಳ ಸದನೆ॥ಅ.ಪ॥ ದೇವರಮಣ ಕಲಶಜಲ ನಿಧಿ ಮದನ ಸಲಿತ ದಿವ್ಯ ಅಮಲಾವರ ಭೂಷಣ ದೌರ್‌ವಿಲಾಸ ದರ್ಶನ ನಿಧಿ ಹರ್ಷ ವಿಶಾಲ ಪದ್ಮನಯನೆ॥ ದೇವ ಮಹೀರುಹ ಮೂಲಾಸೀನೆ ದಿವ್ಯ ಕಳಭ ಯುಗ ಕೃತಾಭಿಶೇಚನ ದೇವ ದೇವದಯಿತೆ ಪರಮಾದ್ಭುತ ಚರಿತೆ ಸುರವರ ಮುನಿಗಣ ಸೇವಿತೆ॥

ಮಾಧವ ಮನೋಹರಿ ಮಹಾಲಕ್ಷ್ಮೀ **ರಾಗ: ನೀಲಾಂಬರಿ, ಮಿಶ್ರಛಾಪು**

ಮಾಧವ ಮನೋಹರಿ ಮಹಾಲಕ್ಷ್ಮೀ ನಮೋಸ್ತುತೆ॥ಪ॥ ಮಹಾವಿಷ್ಣು ಪ್ರಾಣವಲ್ಲಭೆ ಭಕ್ತಜನ ಮನೋಭಿಷ್ಟ ಪ್ರದಾತೆ॥ಅ.ಪ॥ ಧನಧಾನ್ಯ ಸೌಭಾಗ್ಯ ಪ್ರದಾಯಿನಿ ಹರ ಬ್ರಹ್ಮಾದಿ ಸಹೋದರಿ॥ಚರಣ॥

ವರವೀಣಾ ಮೃದುಪಾಣಿ (ಗೀತೆ) **ರಾಗ: ಮೋಹನ, ಆದಿತಾಳ**

ವರವೀಣಾ ಮೃದುಪಾಣಿ ವನರುಹಲೋಚನ ರಾಣಿ। ಸುರಚಿರ ಬಂಬರ ವೇಣಿ ಸುರನುತ ಕಲ್ಯಾಣಿ॥ ನಿರುಪಮ ಶುಭಗುಣ ಲೋಲೆ ನಿರುತ ಜಯಾಪ್ರದ ಶೀಲೆ। ವರದಾಪ್ರಿಯ ರಂಗನಾಯಕಿ ವಾಂಛಿತ ಫಲದಾಯಕಿ॥ ಸರಸಿಜಾಸನ ಜನನಿ। ಜಯ ಜಯ ಜಯ॥

ಸಂಪ್ರದಾಯ

ಆನಂದವಾಗಿದೆ ಶ್ರೀ ಲಕ್ಷ್ಮೀಪೂಜೆ **ರಾಗ: ಬಿಲಹರಿ**

ಆನಂದವಾಗಿದೆ ಶ್ರೀ ಲಕ್ಷ್ಮೀಪೂಜೆ॥ಪ॥ ಮಧುಪರ್ಕ ನೈವೇದ್ಯಗಳಿಂದ। ಗೆಜ್ಜೆ ವಸ್ತ್ರಗಳನ್ನಿರಿಸಿ। ಮೂರು ಜಗದಲ್ಲಿ ತೇಜಿಪೋ ಶ್ರೀಲಕ್ಷ್ಮೀ॥1॥ ಮರುಗ ಮಲ್ಲಿಗೆ ಪಾರಿಜಾತ ಒಳ್ಳೆ ಸಂಪಿಗೆ। ರೋಜ ದವನ ಸರಗಳಿಂದ ಅಲಂಕರಿಸಿ। ಮೂರ್ ಜಗದಲ್ಲಿ ತೇಜಿಪೋ ಶ್ರೀಲಕ್ಷ್ಮೀ॥2॥ ಶುಕ್ರವಾರ ದಿವಸದಲ್ಲಿ। ಲಕ್ಷಮಲ್ಲಿಗೆ ಹೂಗಳಿಂದ। ಅಕ್ಷಯ ಫಲದಾಯಿನಿಗೆ ಸುಕ್ಷೇಮದಿಂದ ಪೂಜೆ ಮಾಡುವ ಶ್ರೀಲಕ್ಷ್ಮೀಗೆ॥3॥ ಕಮಲ ಮಧ್ಯದಲ್ಲಿ ಜನಿಸಿ। ಕಮಲನಾಭನ ಮಡದಿ। ಬೇಡಿದಂತ ವರವ ಕೊಡುವ ಶ್ರೀಲಕ್ಷ್ಮೀ॥4॥

ಆರೋಗಣೆಮಾಡೆ ಅರವಿಂದನಯನೆ **ರಾಗ: ರೀತಿಗೌಳ**

ಅರೋಗಣೆಮಾಡೆ ಅರವಿಂದನಯನೆ। ಮಾರನ ಜನನಿ ಮಂಗಳೆ ಪದ್ಮಸದನೆ॥ಪ॥ ಉಪ್ಪು ಉಪ್ಪಿನಕಾಯಿ ಕೋಸಂಬರಿಗಳು ಹಪ್ಪಳ ಆಂಬೋಡೆ ಎಲ್ಲಾ ಪಲ್ಯಗಳು। ಉಪ್ಪೇರಿ ಪಳದ್ಯ ಚಿತ್ರಾನ್ನ ಕೂಟುಗಳು। ಅಪ್ಪ ಅತಿರಸ ಮಂಡಿಗೆ ಫೇಣಿಗಳು॥1॥ ಸಣ್ಣ ಶಾಲ್ಯಾನ್ನವು ಬೆಣ್ಣೆ ಚಕ್ಕುಲಿಯು। ಸಣ್ಣ ಶ್ಯಾವಿಗೆ ಎಳೆಯ ಕ್ಷೀರ ಪರಮಾನ್ನ। ಕಣ್ಣಿಗೆಸೆವ ಹೋಳಿಗೆ ಎಣ್ಣೂರಿಗೆಯು। ಚೆನ್ನೆ ಲಕುಮಿ ಮೋಹನ್ನ ಹರಿಯೊಡನೆ॥2॥ ಕೇಸರಿ ಕ್ಷೀರಘೃತ ಜೇನುತುಪ್ಪಗಳು। ಮೀಸಲಾಗಿ ತಂದ ಸಕಲ ಭಕ್ಷಗಳು। ಶ್ರೀಶ ನಾಗೇಶಶಯನನ ವಕ್ಷವನ್ನು ಆಶ್ರಯಿಸಿರುವ ಜಗನ್ಮಾತೆ ಮಹಲಕ್ಷ್ಮೀ ॥3॥

ಇಂದಿರೇ ಮಂದಿರದಲ್ಲಿ ನಿಂದಿರೆ **ರಾಗ: ಅಭೇರಿ**

ಇಂದಿರೇ ಮಂದಿರದಲ್ಲಿ ನಿಂದಿರೆ। ಇಂದಿರದೇವಿಯೆ ನಿನ್ನ ಪಾದ ನಂಬಿದೆ॥ಪ॥ ಸಲಹಬೇಕೆನ್ನ ಗಂಧ ತೋಳಸಿ ಅರವಿಂದ ಚಂಪಕ ಪುಷ್ಪದಿಂದ ಪೂಜಿಸುವೆನು ಕುಂದುಗಳೆಣಿಸದೆ॥1॥ ಇಂದಿರೇದೇವಿ ಶತನಂದ ಸರ್ವರಿಗತಿ ಪ್ರೀತೆ।

ಶ್ರೀಮುಕುಂದ ಕಥಾಮೃತ ಜಾತೆ ಕುಂದ ಮಾಲಾ ವಿರಚಿತೆ॥2॥ ಮಂದರೋದ್ಧಾರ ಮುಂಚುಕುಂದ ರಜಾನ ರಾಣಿ ತ್ವರಿತದಿಂ ಚರಣಾರವಿಂದವ ಭಜಿಸುವೆ॥3॥ ಹರಡಿ ಕಂಕಣ ವಂಕಿದ್ವಾರ್ಯ ಕೊರಳಲ್ಲಿರುವ ನಾನಾವಿಧಹಾರ ಬಾಯಲ್ಲಿರುವ ಕರ್ಪೂರವೀಳ್ಯ ಸಾರ॥4॥ ಕಂಠದಿ ಹೊಳೆವಂಥ ಕಂಠಿ ಮಂಗಳಸೂತ್ರ ಕಠಿ ಕಂಠೀರವರಂತೆ ಕೋಟಿ ಸೂರ್ಯರಕಾಂತೆ॥5॥ ಉಟ್ಟದಟ್ಟಿಯನೆರಿ ಒಲಪು ನಡುವಲ್ಲಿಟ್ಟ ಕಿಂಕಿಣಿ ಪಟ್ಟಿ ಹೊಳಪು ಬಹು ಒಟ್ಟ ತುಚಾಗ್ರದ ಕದಪುಕಟ್ಟಿ ಕಂಚುಕ ಸೆರೆಗೊಲಪು॥6॥ ಹೇಮತೊಳಸಿಯ ಸರದ ಶೃಂಗಾರ ಅರಳುಮಲ್ಲಿಗೆ ಜಾಜಿ ಕುಂಕುಮ ಅರಳೆಲೆ ಹೆರಳು ಗೊಂಡೆಗಳಿಂದ ಗೊಂಡ್ಯಗಳಿಂದ ಹರಿಯ ಮೋಹಿಸುವೆ ನೀ॥7॥ ಜಯ ಜಯ ವಿಜಯ ಸಂಪೂರ್ಣೆ ಭಕ್ತ ಭಯ ನಿವಾರಣೆ ಗುಣಮಣಿ ಕಾಯುವರ ಅನ್ಯರನು ಕಾಣೆ ಶೇಷಶಯನನನ್ನು ತೋರೆ ಶುಶ್ರೋಣಿ ಕೈಯ್ಯ ಮುಗಿಯುವೆ ಭವಭಯವ ಪರಿಹರಿಸಮ್ಮ ॥8॥ ದಯವ ತೋರಿಸೆ ಲಕ್ಷ್ಮಿ ಘಲುಘಲು ಗೆಜ್ಜೆಯ ನಾದದಿಂದ ಭಳಿಭಳಿಸುವ ದಿವ್ಯಪಾದ ರನಾದ ಆಹಾ ಪಿಲ್ಯ ಕಾಲುಂಗುರು ನಾದ॥9॥

ಇಂದಿರೆ ಎನ್ನ ಮಂದಿರದಲ್ಲಿ — ರಾಗ: ಅಬೇರಿ

ಇಂದಿರೆ ಎನ್ನ ಮಂದಿರದಲ್ಲಿ ನಿಂದಿರೆ॥ಪ॥ ಇಂದಿರೆ ಪೊಂದಿದೆ ನಿನ್ನ ಮುದದಿಂದ। ಪಾಲಿಸೆ ಎನ್ನನು ಆಹಾ। ಗಂಧ ತುಳಸಿ ಅರವಿಂದ ಮಲ್ಲಿಗೆ ಪುಷ್ಪದಿಂದ ಪೂಜಿಪೆನು ಕುಂದುಗಳ ಎಣಿಸದೆ॥1॥ ಘಲುಘಲು ಗೆಜ್ಜೆಯ ನಾದ। ಅಂಘ್ರ ಫಳಫಳಿಸುವ ದಿವ್ಯಪಾದ। ಆಹಾ। ಎರಡು ಕಂಗಳ ಮಧ್ಯೆಯೆ ಕುಂಕುಮದರಳೆಲೆ ಹೆರಳು ಬಂಗಾರದಿ ಹರಿಯ ಮೋಹಿಸುತಿರ್ಪೆ॥2॥ ಜಯಜಯದೇವ ವರೇಣ್ಯಾ ನಂಘ್ರಿಭಯ ನಿವಾರಣೆ ಎಣೆಗಾಣೆ ನಿನ್ನ। ಭವಭಯವ ಪರಿಹರಿಸಿ ನಮ್ಮಾಲಯದಲ್ಲಿ ನಿಲ್ಲೆ ಪಾಲವಾರಿಧಿ ಲಕ್ಷ್ಮಿ॥3॥

ಕಪ್ಪನ್ಹಚ್ಚಿರೇ ಮಹಾಲಕ್ಷ್ಮೀ ಕಣ್ಣಿಗೆ — ರಾಗ: ಖಮಾಚ್

ಕಪ್ಪನ್ಹಚ್ಚಿರೇ ಮಹಾಲಕ್ಷ್ಮೀ ಕಣ್ಣಿಗೆ। ಅಪ್ಪ ಕೃಷ್ಣನ ಮುದ್ದಿನ ರಾಣಿ॥ ಕಪ್ಪನೆ ಕುರುಳಿನ ನೀಲವೇಣಿ॥ ದೃಷ್ಟಿ ತಾಕುವಂತ ಚೆಲುವೆ। ಮಹಾಲಕ್ಷ್ಮೀಗೆ॥ಪ॥ ಅಂಗಳದೊಳಗಿನ ರಂಗೋಲಿಯಲಿ ನೆಲೆಸಿ ನಿಂತಳಿಗೇ। ಕಂಗಳ ತುಂಬ ಎಳೆಬೆಳದಿಂಗಳ ತುಂಬಿಕೊಂಡಳಿಗೆ। ದೃಷ್ಟಿ ತಾಕುವಂತ ಚೆಲುವ ಮಹಾಲಕ್ಷ್ಮಿಗೇ॥1॥ ಕುಸುಮ ಕಣ್ಣಿನ ಅಸಮರೂಪದ ಚೆಲುವೆ ಲಕ್ಷ್ಮೀಗೆ। ನಸುಬಿರಿದಂತ ತಾವರೆ ತುಟಿಯ ಸುಂದರ ಲಕ್ಷ್ಮೀಗೆ। ದೃಷ್ಟಿ ತಾಕುವಂತ ಚೆಲುವೆ ಮಹಾಲಕ್ಷ್ಮೀಗೆ॥2॥ ಕೊಲ್ಲಾಪುರದಲಿ ನೆಲೆಸಿರುವಂತ ಶ್ರೀಲಕ್ಷ್ಮಿಗೆ। ವೆಂಕಟ ವಿಠಲನ ಮೋಹದ ರಾಣಿ ಭಾಗ್ಯಲಕ್ಷ್ಮಿಗೆ। ದೃಷ್ಟಿತಾಕುವಂತ ಚೆಲುವೆ ಮಹಾಲಕ್ಷ್ಮಿಗೆ॥3॥

ಕೊಡು2 ತಾಯೆ ಮುಡಿಯ ಪ್ರಸಾದವ — ರಾಗ: ಯಮನ್‌ಕಲ್ಯಾಣಿ

ಕೊಡು ಕೊಡು ತಾಯೆ ಮುಡಿಯ ಪ್ರಸಾದವ॥ಪ॥ ಕೊಡು ದೃಢಮತಿಯನು ಶ್ರೀಲಕ್ಷ್ಮೀದೇವಿಯೆ॥ಅ.ಪ.॥ ಕಮಲ ಸಂಭವೆಯೆ ಕಮಲ ಸುಹೃದಯೆ। ಕಮಲಾಕ್ಷಿಯೆ ಕಮಲಾಲಯೆ ಶ್ರೀಲಕ್ಷ್ಮೀ॥1॥ ಮಂಗಳ ರೂಪಿಣಿ ಮಂಗಳದಾಯಿನಿ। ಮಾಂಗಲ್ಯ ಭಾಗ್ಯವ ಪಾಲಿಸು ಶ್ರೀಲಕ್ಷ್ಮೀ॥2॥ ಶಂಕರೀ ಲೋಕದ ಶಂಕರೀ ಶ್ರೀಕರಿ ಕಿಂಕರಿ। ಪೋಷಿಣಿ ವೆಂಕಟೇಶನ ರಾಣಿ॥3॥

ಕಂಡೆನು ಹರಿಸತಿಯ ಸುರುಚಿರ — ರಾಗ: ಶಂಕರಾಭರಣ

ಕಂಡೆನು ಹರಿಸತಿಯ ಸುರುಚಿರ ದುಂಡು ಕಂಕಣ ಕೈಯ। ಮಂಡೇಲಿ ಮಲ್ಲಿಗೆಯಾ ಹೆರಳೊಳು ದಂಡೇಮುಡಿದ ಪರಿಯ॥ಪ॥ ಕಾಲ ಕಡಗ ರುಳಿಯು ಘಲುಘಲು ಹೇಮ ಪ್ರಜ್ವಲ ಧ್ವನಿಯು। ಮೇಲೆ ಕಂಚಿ ಸೀರೆಯು ಪುತ್ಥಳಿ ಮಾಲೆ ತೂಗುವ ಭರವು॥1॥ ಪೈಠಣಿ ಉಟ್ಟಿಹಳು ಹಳದಿ ಕಟ್ಬಾಣಿ ಕಟ್ಟಿಹಳು। ಅಡ್ಡಿಕೆ ಹಾರಗಳು ನೋಳ್ಪರ ನೋಟಕೆ ಹಬ್ಬಗಳು॥2॥ ಸರಸಿಜ ಸಮಮುಖಿಯು ನಾಸಿಕದಿ ಸರಳ ಮುತ್ತಿನ ಲತೆಯು। ಹರಳ ಓಲೆ ಪ್ರಭೆಯು ಕರ್ಣದಿ ಪುರಟದ್ರಾಕ್ಷಿ ಲತೆಯು॥3॥ ಸುಂದರ ಶುಭಗಾತ್ರೆ ಸುಮನಸ ಸಿಂಧೂ ಸುಮನ ಸ್ತೋತ್ರೆ। ಮುಂದೆ ಫಲದ ಪಾತ್ರೆ

ತಂದಿಟ್ಟಿಹಳು ಸಾರಸನೇತ್ರ।।4।। ನಂದ ಬಾಲನ ಮಡದಿ ಸ್ವಪ್ನದಿ ಬಂದು ತೋರಿದೀ ಭರದಿ ಆನಂದವಾಯ್ತು ಮನದಿ ಕಂಡೆನು ಇಂದಿರೇಶನ ದಯದಿ।।5।।

ನವರತ್ನಮಯ ಮಂಟಪದ ಮಧ್ಯದಲಿ — ರಾಗ: ಕುರಂಜಿ

ನವರತ್ನಮಯ ಮಂಟಪದ ಮಧ್ಯದಲಿ। ನವಯೌವ್ವನೆಯರೆಲ್ಲ ಕೂಡಿ ಸಂತೋಷದಲಿ।।ಪ।। ನವ ವಸ್ತ್ರಾಭರಣ ಭೂಷಿತೆಯರಾಗುತಲಿ। ನವನೂತನದ ಹಸೆಮಣೆಯನ್ನಾಸುತಲಿ। ಭುವನಸಖ ನರಸಿಯನು। ವಾರಿಜಭವನಮಿತ ಚರಣೆಯನು। ನೀರಜಭವನಿಯನು। ಭುಜಗೇಂದ್ರವೇಣಿಯ ಭುವನ ಮಾತೆಯ। ಜಲಧಿ ಜಾತೆಯ ಯುವತಿಯರು ಹಸೆಗೆ ಕರೆವರು।।1।। ಶರಧಿಯೊಳುದಿಸಿ ಆತುರದೊಳೀಕ್ಷಿಸುವ। ಸುರಕುಲಕೊಲಿಯಲಬ್ಬರದಿ ಘರ್ಜಿಸುವ। ದುರುಳದಾನವರನ್ನು ಜರೆದು ರಾಜಿಸುವ। ಹರಿಯ ಕೈ ಪಿಡಿದಿಪ್ಪ ಸಿರಿಯೆ ಸೊಂಪೆಸೆವ। ಭರದ ಪಟ್ಟೆಯ ಶಾಲೆಯನ್ನು ಸಮತರದೊಳುಟ್ಟಾ। ಕೈ ನಡುವೆ ಪಟ್ಟೆಯನಿರಿಸಿ ಕುಪ್ಪುಸ ತೊಟ್ಟು। ಕಿರುಗಸ್ತುರಿಯ ತಿಲಕವನಿಟ್ಟು। ಶೋಭಿಪ ಲಲನೆಯೆ ಬಾರೆಂದು ಕರೆವರು।।2।। ಚರಣಂಗಳಿಗೆ ಚಂದ್ರಕಿರಣವ ಜರೆವ। ಕಿರಿಗೆಜ್ಜೆ ಪಾಡಗಗಳನು ನೂಪುರವ ಧರಿಸಿ। ಅಂದುಗೆ ಇಕ್ಕಿ ಬೆರಳಿಗುಂಗುರವ। ವರಪಿಲ್ಲಿ ಸಹಿತಿಟ್ಟು ವರಕಂಠಿಸರವ। ಉರಿವ ಬಂದಿಯು ವಜ್ರಟೀಕೆಯು। ಪವನ ಪುತ್ಥಳಿ ಸರಗಳಿಂದಲಿ। ಗಿರಿಕುಚದ ಮೇಲಿಳಿದು ನಾಭಿಗೆ ಬರುವ ಪರಿಯಲಿ। ಕೊರಳೊಳಾಂತಿಹ ತರುಣಿಯೆ ಬಾರೆಂದು ಕರೆವರು।।3।। ಚಳಿಕೆ ದೋರ್‍ಯಗಳ ಹಿಂಬಳೆ ಕಂಕಣಗಳ। ಚೆಲುವಗಚ್ಚಿನ ಬಳೆಗಳ। ಚೂಡಗಗಳ ಒಲಿವ ತ್ರಾಸಿನ ಬಳೆಗಳ। ಕೇಯೂರಗಳ ಒಲವಿನಿಂದೆರಡು ಕೈಗಳಿಗಿಟ್ಟು। ಬಹಳ। ಹೊಳೆವ ರಾಗಟೆ ಚಂದ್ರಕೇದಿಗೆ ಗಳನು। ಚೂಡಾಮಣಿಯು ಮುಂತಹ। ಸುಲಲಿತಾಭರಣಗಳ ಕ್ರಮದಲಿ। ತಲೆಯ ಮೇಲಿಟ್ಟೆಸೆವ ಲಕುಮಿಯ। ಲಲನೆಯರು ಹಸೆಗೆ ಕರೆವರು।।4।। ಓರಣದಲಿ ಕರ್ಣಯುಗಕೆ ಶೋಭಿಸುವ। ಚಾರುಮೌಕ್ತಿಕದೋಲೆಗಳನು ರಂಜಿಸುವ। ಸಾರಮುತ್ತಿನ ಮುಗುಳುಗಳ ನಿಟ್ಟೆಸೆವ। ವಾರಿಜ ವದನೆ ಶೃಂಗಾರೆ ಬಾರವ್ವ। ಪರಿಜಾತ ಸರೋಜ ಮಿಗೆ ಮಂದಾರ ಸಂಪಿಗೆ। ಜಾಜಿ ವರಕಸ್ತೂರಿ ಮಲ್ಲಿಗೆ ಎನಿಪ। ಕುಸುಮದ ಹಾರಗಳ ಮುಡಿದಿರ್ಪ ರಮೆಯನು। ನಾರಿಯರು ಹಸೆಗೆ ಕರೆವರು।।5।।

ನೀಡು ವರವ ಮಾತೆ — ರಾಗ: ಅಭೇರಿ

ನೀಡು ವರವ ಮಾತೆ ವರಲಕ್ಷ್ಮಿ। ಬೇಡುವೆ ಕಾಪಾಡೆ ಮಹಾಲಕ್ಷ್ಮಿ।।ಪ।। ಚಿತ್ತವು ನೆಲೆಸಲಿ ನಿನ್ನ ಪದದೊಳು। ಇತ್ತು ಪೊರೆ ಸೌಭಾಗ್ಯವೆಮ್ಮೊಳು। ಚಿತ್ತಜನಯ್ಯನ ಅರಸಿ ಕೃಪೆಯೊಳು। ನಿತ್ಯ ನೆಲೆಸು ನಮ್ಮ ಗೃಹದೊಳು।।1।। ಶುಭವಾಣಿಯ ನುಡಿಸಮ್ಮ ವದನದಿ। ಸುಖ ಶಾಂತಿ ಕರುಣಿಸು ಎಮ್ಮ ಗೃಹದಿ। ಇಭಗಮನೇ ಶುಭೆ ಇಂದೀವರಾಕ್ಷಿ। ಅಂಬುಜಾಲಯೆ ಕೊಲ್ಹಾಪುರವಾಸಿ।।2।।

ಪಾಡುವೆ ಶ್ರೀರಮಣಿ — ರಾಗ: ಬಿಲಹರಿ

ಪಾಡುವೆ ಶ್ರೀರಮಣಿ ಪಾಡುವೆ ಶ್ರೀರಮಣಿ। ನಿನ್ನನ್ನು ಕೊಂಡಾಡುವೆ ಹರಿರಮಣಿ।।ಪ।। ಪಾಡೆವು ನಿನ್ನನ್ನು ಜೋಡಿಸಿ ಕರಗಳ। ಮಾಡಿ ವಂದನೆ ನಾ ಬೇಡುವೆ ವರವ।।ಅ.ಪ.।। ಅರುಣೋದಯದಿ ಶ್ರೀ ಹರಿಪ್ರಿಯೆ ನಿನ್ನನ್ನು ಪರಮ ಪುರುಷ ನರ ಹರಿಯೊಡನೆ। ಸ್ಮರಿಸುವೆ ಪ್ರತಿದಿನ ಅರಿಶಿನ ಕುಂಕುಮ। ಸ್ಥಿರವಾಗಿರುವ ಸೌಭಾಗ್ಯ ನೀಡೆಂದು।।1।। ಸುರಗಂಗೆಲಿ ಮಿಂದು ವರ ಮಡಿಯನೆ ಉಟ್ಟು। ಹರಿದ್ರಾ ಕುಂಕುಮವಿಟ್ಟು ಹರುಷದಲಿ। ಗುರುಮಂತ್ರ ಜಪಿಸಿ ಸದ್ಗುರು ಹಿರಿಯರ ಸೇವೆ। ಹರುಷದಿ ಮಾಡಿ ಸನ್ನುತಿಗಳಗೈವೆ।।2।। ಪತಿಸುತ ಸೇವೆಯು ಅತಿಥಿ ಸತ್ಕಾರವು ಹಿತವಚನವು ಪರಉಪಕಾರ। ವ್ರತನೇಮವು ಹರಿಕಥೆಗಳ ಮನನವು। ರತಿಪತಿ ಪಿತನಿಗರ್ಪಿಪ ಮತಿ ನೀಡೆ।।3।। ಭೋಗಿ ಕುಂತಳೆ ನಿಗಮಾಗಮ ಸನ್ನುತೆ। ಯೋಗ ಭೋಗಗಳಿತ್ತು ಕಾಪಾಡೆ। ನಾಗೇಶ ಶಯನನ ಬಾಗಿ ಭಜಿಸುವಂಥ। ಭಾಗ್ಯವ ಕರುಣಿಸು ಭಾರ್ಗವಿ ತಾಯೆ।।4।।

ಪಾಲಿಸಮ್ಮ ಪಾರಿಜಾತವ ರಾಗ: ನೀಲಾಂಬರಿ

ಪಾಲಿಸಮ್ಮ ಪಾರಿಜಾತವ ಪದುಮಾಕ್ಷಿ ಲಕ್ಷ್ಮೀ। ಪಾಲಿಸಮ್ಮ ನೀಲವೇಣಿಯೆ।ಮೇಲೆ ನಲಿಯುತಿರುವ ನಳಿನ ಮಾಲೆಯನ್ನು ತೆಗೆದು ದಯದಿ ಲೀಲೆಯಿಂದ ಎನ್ನ ಉಡಿಗೆ॥1॥ ಅರಳು ಮಲ್ಲಿಗೆ ಸುರಗಿಸಂಪಿಗೆ ಪರಿಮಳಿಸುವ ಸ್ವರ್ಣ ಕೇದಿಗೆ। ಕರಿವರದನ ಅರಸಿ ಕಮಲೆ ಕರುಣದಿಂದ ಕಮಲ ಸುಮವ॥ 2॥ ನೆತ್ತಿಲಿ ಶೋಭಿಸುತಲಿರುವ ಮುತ್ತಿನ ಸಾಲುಗಳಲ್ಲೊಂದು। ಮುತ್ತು ತೆಗೆದು ಎನಗೆ ಮುತ್ತೈದೆ ತನವಕೊಡುವೆನೆನುತ॥3॥ ಸುಗುಣಿ ಸೀತೆ ಭಾಮೆ ರುಕ್ಮಿಣಿ ಮಗಳು ನಾನೆನುತ ತಿಳಿದು ನಗಧರ ನಾಗೇಶ ಶಯನ ಮಿಗೆ ಪ್ರೀತಿಯಲಿ ಮುಡಿಸಾದು ಹೂವ॥4॥

ಪೂಜೆ ಮಾಡೋಣ ಬನ್ನಿ ಲಕ್ಷ್ಮೀಯ ರಾಗ: ಆನಂದಭೈರವಿ

ಪೂಜೆ ಮಾಡೋಣ ಬನ್ನಿ ಲಕ್ಷ್ಮೀಯ ವಾರಿಜಾಕ್ಷಿಯರೆಲ್ಲರು॥ಪ॥ ಅರಿಶಿನ ಕುಂಕುಮ ಸಿಂಧು ಪರಿಪರಿಯ ಗಂಧದಿಂ ಮದನನಯ್ಯನ ರಾಣಿಗೆ ನಾ ಹರುಷದಿಂದಾ ಪೂಜಿಪೆ॥1॥ ಮಲ್ಲೆ ಮಲ್ಲಿಗೆ ಜಾಜಿ ಸಂಪಿಗೆ ಒಳ್ಳೆ ಪಾದರಿ ಸುಮಗಳು। ಕರುಣಾಕರನ ಪ್ರಿಯಳಿಗೆ ನಾ ಹರುಷದಿಂದಾ ಪೂಜಿಪೆ॥2॥ ಕದಳಿ ಖರ್ಜೂರ ದ್ರಾಕ್ಷಿ ಬದರಿ ಮಾವಿನ ಫಲಗಳು। ಮಧುಸೂದನನ ರಾಣಿಗೆ ನಾ ಹರುಷದಿಂದ ಪೂಜಿಪೆ॥3॥

ಬಾರೆ2 ಮೋಹನಾಂಗಿಯೆ ಮುತ್ತಿನ ರಾಗ: ತೋಡಿ

ಬಾರೆ ಬಾರೇ ಮೋಹನಾಂಗಿಯೆ ಮುತ್ತಿನ ಹಸೆಗೆ॥ಪ॥ ಮುತ್ತು ಮಾಣಿಕ್ಯದಿಂದ ಮೆರೆವ ರತ್ನಖಚಿತ ಆಭರಣವಿಟ್ಟು ಚಿತ್ತಜನಯ್ಯನ ಸಹಿತವಾಗಿ ಉತ್ತಮ ಪೀಠಕೆ ಬೇಗ ಬಾರೆ॥1॥ ಸಾಲಾವಾಳೀ ಸೀರೆಯನುಟ್ಟು ಹೀರಮುತ್ತಿನ ಕುಬುಸ ತೊಟ್ಟು ಘೋರ ವಜ್ರದಿಂದ ಮೆರೆವ ಹೀರ ಪೀಠಕೆ ಬಾರೇ॥2॥ ಸಾರಸಾಕ್ಷಿ ಲಕ್ಷ್ಮೀದೇವಿ ಸಾರುತಿಲ್ಲಿಗೆ ಬೇಗದಿಂದ ಓರೆಗಣ್ಣಿನ ನೋಟದಿಂದ ಶ್ರೀರಂಗರಾಯನ ಪ್ರಾಣವಲ್ಲಭೆ॥3॥

ಬಾರೆ ಲಕ್ಷ್ಮೀ ಹಸೆಗೆ ಬೇಗನೇ ರಾಗ: ತೋಡಿ

ಬಾರೆ ಲಕ್ಷ್ಮೀ ಹಸೆಗೆ ಬೇಗನೇ॥ಪ॥ ಮಾರನ ಜನನಿಯೇ ಸುರರು ನಾರದಾದಿಗಳು ಸೇರಿ ಮೊರೆಯನಿಡುತಲಿಹರು। ಸಾರಸಾಕ್ಷಿ ನಿಮ್ಮ ದಾರಿ ಎದುರು ನೋಡುತಿರುವರಲ್ಲೇ॥1॥ ಶೇಷಗಿರಿವಾಸ ನಮ್ಮ ಶೇಷನರ್ಧಾಂಗಿ ಸಹಿತ। ಆಸೆ ಪೂರೈಸಿ ಸಲಹೇ ಈಶಳೇ ನಮ್ಮ ಕರುಣದಿಂದಲಿ॥2॥ ಫುಲ್ಲನಾಭನನ್ನು ಸೇರಿ ಚೆಲ್ವೆ ಮುಗುಳುನಗೆಯ ತೋರಿ। ಎಲ್ಲರಭಿಲಾಷೆಗಳನು ಸಲ್ಲಿಸುತ್ತ ತಾಯೆಬಾರೆ॥3॥

ಬಾರೆ ಸೌಭಾಗ್ಯ ನಿಧಿಯೆ ತಾರೆ

ಬಾರೆ ಸೌಭಾಗ್ಯ ನಿಧಿಯೆ ತಾರೆ ತಾರೆ ಸಿರಿಯ॥ಪ॥ ಕಿಂಕಿಣಿಕಿಣಿ ಪೈಂಜಣಿ ಜಣಿಸುತ ಮಂಜುಳವಾಣಿಯೆ ಮಂಗಳವೇಣಿಯೆ॥ಅ.ಪ.॥ ಜ್ಯೋತಿಗಳಿಂದಲಿ ಅಲಂಕರಿಸುವೆನು। ನೀತಿಯಲಿ ನಿನ್ನ ಪೂಜಿಸುತ್ತಿರುವೆ। ಪ್ರೀತಿಯಲಿ ಭಕ್ಷ್ಯ ಭೋಜ್ಯ ಬಡಿಸುವೆ। ಆತುರದಿಂದಲಿ ನಿನ್ನ ಕಥೆ ಹೇಳು ಎನ್ನುವೆ॥1॥ ಮಲ್ಲೆ ಮಲ್ಲಿಗೆ ಮೇಲೆ ಚೆಲ್ಲಿಸುವೆ। ಅಲ್ಲಲ್ಲಿ ಮುತ್ತೈದೇರನೊಪ್ಪಿಸುವೆ। ಫುಲ್ಲಲೋಚನೆ ಕೃಷ್ಣವಲ್ಲಭೆ। ಬಲ್ಲಿದ ವಾದ್ಯದಿಂ ಪಾಡಿ ಹೊಗಳುವೆ॥2॥ ವರ್ಣನೀಲನ ಹೃದಯದೊಳಿರುವಿ। ಸ್ವರ್ಣರೂಪದಿಂ ಮೆರೆಯುತಲಿರುವಿ। ನಿನ್ನಯ ನಾದ ಗೋಪಾಲ ಕೃಷ್ಣನ। ಕರುಣದಿಂದಲಿ ಕಾರ್ಯ ನಡೆಸುವಿ॥3॥

ಮಡಿಲ ತುಂಬುವೆ ಬಾರಮ್ಮ ರಾಗ: ಹಂಸನಾದ, ತ್ರಿಪುಟ

ಮಡಿಲ ತುಂಬುವೆ ಬಾರಮ್ಮ ಶ್ರೀ ಮಹಾಲಕ್ಷ್ಮೀ। ಮಡಿಲ ತುಂಬುವೆ ಬಾರಮ್ಮ....॥ಪ॥ ಕಡಲ ಶಯನನ ರಾಣಿ

ಪ್ರೀತೆ ತಡಮಾಡದೆ ಬೇಗ।।ಅ.ಪ।। ಹರಿದ್ರಾ ಕುಂಕುಮ ಸಿಂಧೂರ ಮಂಗಳ ದ್ರವ್ಯ। ಮರುಗ ಮಲ್ಲಿಗೆ ಜಾಜಿ ಹೂಗಳ ಮುಡಿಸುವೆ। ಪರಿಪರಿ ಸುಮಗಳಿಂ ಸಿಂಗಾರ ಮಾಡುತ। ಪರಮೋಲ್ಲಾಸದಿ ನಲಿವೆ ನಾ ಸಂತತ।।1।। ಕದಳಿ ಮಾವು ಖರ್ಜೂರ, ಕಿತ್ತಳೆ ದಾಳಿಂಬೆ। ನವನವ ಫಲಗಳಿಂ ಉಡಿಯ ತುಂಬಿಸುವೆ। ಪರಮ ಸಂತೃಪ್ತಿಯಲಿ ಸೇವೆಯ ಸ್ವೀಕರಿಸೆ। ಹರಸೆ ನಮ್ಮೆಲ್ಲರ ಹರಿಯ ಅರ್ಧಾಂಗಿ ಸರಸೆ।।2।। ಅಚ್ಚರೇಶಿಮೆ ಪಟ್ಟೆ ಸೀರೆ ಅರ್ತಿಯಿಂದಲಿ ಉಡಿಸಿ ಸುಖಿಸುವೆ। ಅಷ್ಟ ಸೌಭಾಗ್ಯವು ದಿನದಿನ ಹೆಚ್ಚಿಸೆಂದು ನಿನ್ನ ಬೇಡುವೆ। ಇಷ್ಟ ದೇವತೆ ಇರಲಿ ಎಮಗೆ ಮುತ್ತೈದೆತನವು ದೀರ್ಘ। ಕಷ್ಟಗಳ ಪರಿಹರಿಸಿ ಕಾಯೆ ಶಾರದೇನುತೆ ಮಹಾಮಾಯೆ।।3।।

ವರ ಸರಸದ ಪೀಠಕೆ ಬಾ2 **ರಾಗ: ಸಿಂಧೂಭೈರವಿ**

ವರ ಸರಸದ ಪೀಠಕೆ ಬಾಬಾ। ತರುಣೀ ಮಣಿಯೆ ನೀ।।ಪ।। ಎತ್ತಲು ನೋಡಲು ಸುತ್ತಲು ಮಲ್ಲಿಗೆ। ಲತೆಗಳು ಶೋಭಿಸುತಿಹವು। ಪುತ್ಥಳಿಯಂತೆ ಚಿತ್ತದಿ ಹೊಳೆಯುವ। ಚಿತ್ರದ ಪೀಠಕೆ ಬಾಬಾ।।1।। ಮಲ್ಲೆಯು ಮಲ್ಲಿಗೆ ಒಳ್ಳೆಯ ಸಂಪಿಗೆ। ಸಲ್ಲಲಿತೆ ಹೂಗಳ ಮುಡಿದು। ಮೆಲ್ಲನೆ ಮುಡಿದಾ ಮಲ್ಲಿಗೆಯಾ। ಸಲ್ಲಲಿತಾಂಗಿಯೇ ನೀ ಬಾಬಾ।।2।। ಮಡದಿಯರೆಲ್ಲರು ಸಡಗರದಿಂದಲಿ। ನಡೆಮುಡಿ ಹಾಸುತಲಿಹರು। ಪೊಡವಿಯ ಪತಿ ಶ್ರೀ ಉಡುಪಿಯ ಕೃಷ್ಣನ। ಮಡದಿಯೇ ಪೀಠಕೆ ಬಾಬಾ।।3।।

ವರ ರತ್ನದಾ ಹಸೆಗೆ **ರಾಗ: ಶಂಕರಾಭರಣ, ಆದಿತಾಳ**

ವರ ರತ್ನದಾ ಹಸೆಗೆ ಸಿರಿ ಲಕ್ಷ್ಮೀ ಬಾರೌ ನೀ। ಮಂದರೋದ್ಧಾರಿ ಹರಿ ಮಡದಿ ಮಹಲಕ್ಷ್ಮೀಯೇ।।ಪ।। ಸಾಂದ್ರ ಸುಗುಣಾರಾಮಚಂದ್ರನಾ ರಾಣಿಯೆ ನೀ। ಕ್ಷೀರಸಾಗರಸುತೆ ವಾರಿಜಾಕ್ಷನಾಪ್ರಿಯೆ। ನಾರದವಂದಿತೆ ನಾಮಗಿರಿಯೆ ನೀ। ಪದುಮದಳಾಕ್ಷಿಯೇ ಪಂಕಜಮುಖಿಯೆ ನೀ। ವೆಂಕಟರಮಣನಾ ಬಿಂಕದರಾಣಿಯೇ।।1।।

ವರವಕೊಡಮ್ಮ ತಾಯೇ **ರಾಗ: ಶ್ರೀ**

ವರವಕೊಡಮ್ಮ ತಾಯೇ ನೀ ಸೌಭಾಗ್ಯಾದಾ ವರವಕೊಡಮ್ಮಾ।।ಪ।। ಸಾರಾವಳೀಯಾನೇ ಉಟ್ಟೂ। ನಾರೀಯರೆಲ್ಲಾ ಸಾಧುಕಸ್ತೂರಿಯನೆ ಇಟ್ಟು। ನಾರಿ ಮಹಲಕ್ಷ್ಮಿಗೆ। ಮನಾವಿಟ್ಟು। ಪೂಜಿಸೇ ಮುತ್ತೈದೇತನಾವನ್ನು ಸ್ಥಿರಾವಾಗಿ ಇರುವಂತಾ।।1।। ಮಾಳೀಗೇ ಮನೇಯೋಳಾಗೇ। ನಾರೀಯರೆಲ್ಲಾ ಜೋಡು ತೋಟ್ಟಿಲನೇ ಕಟ್ಟೀ। ನಾರೀ ಮಹಾಲಕ್ಷ್ಮೀಗೆ ಮನಸಿಟ್ಟು ಪೂಜಿಸಿ। ಓಲೆಯ ಭಾಗ್ಯವು ಸ್ಥಿರಾವಾಗಿರೂವಂತಾ।।2।।

ವರಗಳ ನಾ ಬೇಡುವೆನೂ **ರಾಗ: ಅಭೇರಿ**

ವರಗಳ ನಾ ಬೇಡುವೆನೂ। ವರದಾಯಕಿನೀ ನೀಡು। ಸಿರಿಸೌಮಂಗಲ್ಯಗಳಂ ನಿರುತದಿ ನೀ ಕೊಡುತೀಗಲೆ।।ಪ।। ಫುಲ್ಲನಾಭತರವಾಸಿನಿಯೇ ಸಲ್ಲಲಿತದಿ ಬೇಡುವೆನು। ನಿಲ್ಲದೆ ನೀ ಕರುಣಿಸುತಾ ವಲ್ಲಭನಾ ಅಗಲದತೆರ।।1।। ಕಮಲಾಸನಿ ಜನನೀ ಸುಕೋಮಲ ಪದಯುಗವಂ ಮಮತೆಯೊಳು ಪೂಜಿಪೇನೂ। ವಿಮಲತೆಯಿಂ ಕೊಡುಕೀಗಲೇ।।2।। ಶ್ರೀನಿವಾಸ ನಿಜಜಾಯಯೆ ನಾ ಧ್ಯಾನಿಪೆನು ಮನವಿತ್ತು। ಮಾನುನಿಯಂ ಮನದೊಳು ಸನುಮತದಿಂ ಸಲಹೆನುತೆ।।3।।

ಸಾಗರಸುತೆ ಬಾರೇ ಬೇಗದೀ **ರಾಗ: ಮಾರ್ಗಹಿಂದೋಳ**

ಸಾಗರಸುತೆ ಬಾರೇ ಬೇಗದೀ ಪೀಠಕೀಗಾ।।ಪ।। ಸಾಗರಸುತೆ ಬಾರೆ। ಸಾರಾವಾಳಿಯನುಟ್ಟು ಹೀರಭೂಷಣತೊಟ್ಟು। ಸಾರಸಾಲಯೇ ಲಕ್ಷ್ಮೀನಾರಾಯಣ ಸಹಿತ।।1।। ಕಂದನಂಕಾಪಾಡಲು ಕುಂಭದಿಂದುದಿಸಿದಾ। ಸುಂದರಾ ನೃಹಾರಿಯ। ಇಂದು ಸೋದರಿರಮೇ।।2।।

ಹಸೆಗೆ ಬಾರೆ ಕುಸುಮನೇತ್ರೆ **ರಾಗ: ಕಾನಡ**

ಹಸೆಗೆ ಬಾರೆ ಕುಸುಮನೇತ್ರೆ। ಶಶಿಧರಾನರಾಣಿಯೇ। ಹೊಸಮುಕ್ತಿನಹಸೆಯ ಬರೆದು। ಶಶಿಮುಖಿಯರು ಕರೆವರೂ॥ಪ॥ ಕಾಲಲಂದಿಗೆ ರುಳಿಯುಗೆಜ್ಜೆ। ಪಾದದಲ್ಲಿ ಹೊಳೆಯುತಾ। ಮೋಹನಾಳ ನಿನ್ನ ಭರಿತೆ। ಭಾಮಿನಿಯರು ಕರೆವರೂ॥1॥ ಉಟ್ಟ ಸೀರೆ ಕೊಟ್ಟ ಕುಬುಸ। ಇಟ್ಟ ತಿಲುಕ ಹೊಳೆಯುತ ಬಟ್ಟಗಂಗಳ ಭಾಮೆ ನಿನ್ನನೂ। ಲಕ್ಷ್ಮಿಪ್ರಿಯರು ಕರೆವರೂ॥2॥ ಮದನಜನಕಾನೆ ಮದನ ಸುಂದರಿ ಮಧುರ ಪಾಣಿ ರುಕ್ಮಿಣಿ। ಸಡಗರದಿ ನಡೆದು ಬಾರೆ ನೀ। ಬಿಡಿ ಮುತ್ತುಗಳು ಉದುರುತಾ॥3॥

ಹೂವಾ ಕೊಡೆ ನೀ ಕರುಣದಿ **ರಾಗ: ಷಣ್ಮುಖಪ್ರಿಯ**

ಹೂವಾ ಕೊಡೆ ನೀ ಕರುಣದಿ ಹೂವ ಕೊಡೆ॥ಪ॥ ಹೂವಕೊಡೆ ನೀ ಹುಟ್ಟಿ ಬೆಳೆದಿರುವಂಥ ಘೋರ ಸಂಸಾರವ ಸಾಗರದಾಟುವಂತ॥1॥ ಮಲ್ಲಿಗೆ ದವನ ಶಾವಂತಿ ಕುಸುಮವು। ನೀಲವೇಣಿಯೆ ನಿನ್ನ ನಿಧಿಯೊಳೊಪ್ಪುವಂತ॥2॥ ನಾಗಲೋಕಾದಿಂದ ನಾರದ ಮುನಿತಂದ। ನೀಲವೇಣಿಯೆ ನಿನ್ನ ನಿಧಿಯೊಳೊಪ್ಪುವಂತ॥3॥

ಹೂವಾಕೊಡೆ ಹೂವಕೊಡೆ **ರಾಗ: ಕಾಂಬೋಧಿ**

ಹೂವಾ ಕೊಡೆ ಹೂವಕೊಡೆ। ಹೂವಾಕೊಡೆ ಲಕ್ಷ್ಮಿ। ಕ್ಷೀರಾಸಾಗರದೊಳ್ ನಿನ್ನ। ಪೂಜಿಪೆ ಲಲಿತೆ। ಶ್ರೀಮಹಲಕ್ಷ್ಮಿ॥ಪ॥ ಪದ್ಮಾ ಕ್ಷೀರಮಣನಿಗೆ। ಪದ್ಮಾಮುಖಿಯೆ ಲಕ್ಷ್ಮಿ। ಪದ್ಮಾಪಾದವ ನಂಬಿದೇನೆ ಕಮಲಮುಖಿಯೆ ಲಕ್ಷ್ಮಿ॥1॥ ಹರಿಸಿನ ಕುಂಕುಮ ಗಂಧ ಪುಷ್ಪಗಳಿಂದ। ಪೂಜಿಪೆ ಲಕ್ಷ್ಮಿ। ಚರಣಸೇವೆ ಗಳಿಗೆ ತಾಯೇ ವರವ ಕೊಡು ಶ್ರೀ ಮಹಾಲಕ್ಷ್ಮಿ॥2॥ ಎಳೆಮಾವಿನ ಚಿಗುರು ಪೋಲುವಾ। ಚರಣಾರವಿಂದಕೆ ಶಿರಇಟ್ಟು। ಕರೆದು ಜನರ ತೋರೆ ಎನುತ ಕಮಲಾಮುಖಿಯೆ ಲಕ್ಷ್ಮಿ॥3॥

ಆರತಿ

ಆರುತೀಯನೆತ್ತುವೆ ಅರವಿಂದನಯನೇಗೆ

ಆರುತೀಯಾ ನೆತ್ತುವೆ। ಅರವಿಂದನಯನೇಗೆ। ಕ್ಷೀರಸಾಗರ ಜಾತೆಜಗದಾದಿ ಲಕ್ಷ್ಮಿಗೆ॥ಪ॥ ಅಂದಿಗೆಗೆಜ್ಜೆಯು ಘನಪಾದಾಂಬುಜಗಳಿಗೆ। ಕುಂದಣೋದ್ವಡ್ಯಾಣ್ಯವು। ಪೀತಾಂಬ್ರನಡುವೀಗೆ। ದುಂಡುಕಂಣಣೀಯು ಹರಡಿ ಪೊಂದಿದ್ದಸ್ತಕ್ಕೆ। ಮಂದಹಾಸದಿಂದ ಪೂರ್ಣಚಂದ್ರವದನೆಗೆ॥1॥ ಸರಿಗೆ ಕಾಸಿನ ಸರಗಳ್ಹೊಳೆವೋ। ಸರಸೀಜಾಕ್ಷಿಗೆ। ಜರಿಯ ಕುಪ್ಪುಸ ನಾಗಮುರಿಗೆ। ವಂಕಿತೋಳಿಗೆ। ಬೆರಳಮುದ್ರಿಕೆ ವಾಲೆ ಜುಮುಕಿ। ಚಂದ್ರಮುರುವೀಗೆ। ಕಲೆಯುತೋರುತಲಿರ್ಪದೇವಿಯ। ನಸುಲತಿಲಕಕ್ಕೆ॥2॥ ಗೊಂಡ್ಯರಾಗಟೆ, ಚೌರಿ, ನಾಗರ, ಹೆರಳು ಬಂಗಾರ ದುಂಡು,ಮಲ್ಲಿಗೆ। ಮಾಲೆ, ಜಾಜಿ, ಬಕುಳೆಸರಗಾಳ। ರಂಜಿಸುತ ಆಪಾದ ಮಸ್ತಕ। ದಿಂದ ಶೃಂಗಾರ। ಬಂದು ಪೀಠದೊಳಿರುವ ಗುರುರೂಪೆಗೆ ಮಂಗಾಳ॥3॥

ಆದಿಲಕ್ಷ್ಮೀದೇವಿಗೆ ಆರತಿಯ ಎತ್ತಿರೇ

ಆದಿಲಕ್ಷ್ಮೀದೇವಿಗೆ ಆರತಿಯ ಎತ್ತಿರೇ। ಆದಿ ಲಕ್ಷ್ಮೀದೇವಿಗೆ ಆರತಿಯನೆತ್ತಿರೆ॥ಪ॥ ಅರಿಶಿನ ಕುಂಕುಮಹಚ್ಚಿ ಹೂಮಾಲೆ ಹಾಕಿರೆ। ಧಾನ್ಯಲಕ್ಷ್ಮೀಗೆ ನೀವು ಧೂಪದೀಪ ಹಚ್ಚಿರೆ॥ಅ.ಪ॥ ಕನಕಲಕ್ಷ್ಮೀಗೆ ನೀವು ನೈವೇದ್ಯತನ್ನಿರೆ। ಬಲದ ಕಾಲು ಮುಂದೆ ಇಟ್ಟು ಹೊಸಲು ದಾಟಿ ಬಾರಮ್ಮ॥ ಭಾಗ್ಯದ ಲಕ್ಷ್ಮೀ ಮಾಂಗಲ್ಯ ಸೌಭಾಗ್ಯ ನೀಡಮ್ಮ। ಹಾಲು ತುಪ್ಪ ಹೊಳೆಹರಿಸಿ ಹರುಷ ಸುಖ ತಾರಮ್ಮ। ಧನಧಾನ್ಯವ ಕೊಟ್ಟು ಸಂತಾನ ಕರುಣಿಸಮ್ಮ॥1॥ ಕ್ಷೀರಾಬ್ಧಿತನಯೇ ಆನಂದನಿಲಯೇ ವಿಷ್ಣುಪ್ರಿಯೆ ಬಾರೇ। ಕಮಲನಯನೆ ನಿಜಕಮಲವದನೇ ಕಮಲಾಕ್ಷವಲ್ಲಭೆ ಬಾರೆ। ಪುಷ್ಪಸುಗಂಧಿನಿ ಹರಣ ವಿಮೋಚಿನಿ ಕರುಣೆಯನು ತೋರೆ। ಆನಂದ ರೂಪಿಣಿ ಚಿರಸುಖ ದಾಯಿನಿ ಇಷ್ಟಾರ್ಥವ ತಾರೆ॥2॥

ಆರತಿ ಎತ್ತುವೆ ಮಾರನ ಜನನಿಗೆ **ರಾಗ-ಆರಭಿ**

ಆರತಿ ಎತ್ತುವೆ ಮಾರನ ಜನನಿಗೆ ತೇಜೋನ್ವಿತೆಯಾಗಿ ರಾಣಿ ಮಹಲಕ್ಷ್ಮೀಗೆ॥ಪ॥ ಇಂದಿರಾದೇವಿಗೇ ಚಂದಿರವದನೆಗೆ ಇಂದ್ರನ ಸಹೋದರಿ ರಾಣಿ ಮಹಲಕ್ಷ್ಮಿಗೆ॥1॥ ವಿಷ್ಣುವಲ್ಲಭೆಗೆ ಭಕ್ತರುದ್ಧಾರೆಗೆ ವಿಷ್ಣು ವಕ್ಷಸ್ಥಳರಾಣಿ ಮಹಲಕ್ಷ್ಮಿಗೆ॥2॥ ಪದ್ಮೋದ್ಭವೆಗೆ ಪದುಮದಳಾಕ್ಷಿಗೆ ಪದುಮನಾಭನಾ ರಾಣಿ ಮಹಲಕ್ಷ್ಮೀಗೆ॥3॥

ಆರತಿ ಎತ್ತಿರೆ ನೀರಜ ನಯನೆಗೆ **ರಾಗ: ಸಿಂಹೇಂದ್ರಮಧ್ಯಮ**

ಆರತಿ ಎತ್ತಿರೆ ನೀರಜ ನಯನೆಗೆ। ನೀರಜನಾಭನ ರಮಣೀಗೆ। ಮಾರನ ಮಾತೆಗೆ ಕೋರಿದ ವರಗಳ। ತೋರುವಗೆ ವೈಭವಲಕುಮಿಗೆ॥ಪ॥ ಮಂಗಳ ರೂಪೆಗೆ। ಮಂಜುಳ ರೂಪೆಗೆ ಮಂಜುಳ ಭಾಷೆಗೆ ಜಗಂಗಳ। ಮೂರು ಮಾತೆಗೆ ರಂಗನ ಮಡದಿಗೆ। ಸಂಗೀತ ಲೋಲೆಗೆ ಹಿಂಗದ ಸಿರಿಯ ಕೊಡುವಾಕೆಗೆ॥1॥ ಎಂಟು ರೂಪದಿ ಜಗವ ಪಾಲಿಪ ಮಾತೆಗೆ। ನಂಬಿದ ಭಕುತರ ಸಲಹುವಳಿಗೆ। ಮಂಗಳ ಮಹಾವಿಷ್ಣು ಮಡದಿಗೆ। ಈಗಲೆ ಎತ್ತಿರಿ ಆರತಿ ಲಕುಮಿಗೆ॥2॥

ಆರತಿ ಬೆಳಗಿರೆ ಅವನಿಜೆಗೆ **ರಾಗ: ಸುರಟಿ**

ಆರತಿ ಬೆಳಗಿರೆ ಅವನಿಜೆಗೆ। ನಾರಸಿಂಹನ ಸತಿ ನೀರೆ ಲಕ್ಷುಮಿಗೆ॥ಪ॥ ಮಿಂದು ಮಡಿಯನುಟ್ಟು। ಗಂಧ ಕುಂಕುಮವಿಟ್ಟು। ಮಂದಾರ ಮಲ್ಲಿಗೆ ಮುಡಿಯಲ್ಲಿಟ್ಟು। ಕುಂದಣ ತಟ್ಟೇಲಿ ಚಂದದೋಕುಳಿ ತುಂಬಿ। ಅಂದದ ಜ್ಯೋತಿಗಳನು ಹಚ್ಚಿರಿಸಿ॥1॥ ಶ್ರೀದೇವಿ ಭೂದೇವಿ ದುರ್ಗಾದೇವಿಗೆ। ಮಾಧವನರಸಿಗೆ ಮಹಲಕ್ಷ್ಮೀಗೆ॥ ಮೋದದಿಂದಲಿ ಶ್ರೀಮಾನಿನಿ ಹರಿಣೆಗೆ। ಆದರದಿಂದಲಿ ಆದಿಲಕ್ಷುಮಿಗೆ॥2॥ ಶ್ರೀಮಾಯಾ ಜಯಕೃತಿ ಶಾಂತಿದೇವಿಯರಿಗೆ। ಆ ಮಹಾ ರುಕ್ಮಿಣಿ ಭಾಮೆಗೆ। ಸಾಮಜವರದ ಶ್ರೀನಾಗೇಶ ಶಯನನ। ಕಾಮಿನಿ ಶ್ರೀ ರಮಾದೇವಿ ಅಂಬಳಿಗೆ॥3॥

ಆರುತಿ ಬೆಳಗಿರೆ ನಾರಿಯರು ಬೇಗ **ರಾಗ: ಗರುಡಧ್ವನಿ**

ಆರುತಿ ಬೆಳಗಿರೆ ನಾರಿಯರು ಬೇಗ। ಆದಿ ಕೊಲ್ಲಾಪುರದ ಮಹಾಲಕ್ಷ್ಮೀಗೆ। ಆಡುತ ಪಾಡುತ ಜಾಣೆಯರೆಲ್ಲರು ಆದಿ ನಾರಾಯಣನ ಪ್ರಿಯಳೀಗೆ॥ಪ॥ ಪಿಲ್ಲಿ ಕಾಲುಂಗುರ ರುಲುಲ್ಲುರುಳಿ ಪೈಝಣ। ಘಲ್ಲು ಘಲ್ಲೆಂದು ಹೆಜ್ಜೆಯನಿಡುತ। ಉಲ್ಲಾಸದಿಂದಲಿ ನಡುವಿಗೊಡ್ಯಾಣ। ಫುಲ್ಲನಾಭನ ಪ್ರಿಯಳೀಗೆ॥1॥ ಜರಿಯ ಪೀತಾಂಬರ ನಿರಿಗೆಯೊಳ್ ನಲಿಯುತ। ಜಗಜಗಿಸುತ ತಾ ಹೊಳೆಯುತಲಿ। ಇಟ್ಟ ಕಂಚುಕವು ತೊಟ್ಟ ವಂಕಿಯು ತೋಡ। ಬೆಟ್ಟದ ವೆಂಕೋಬನ ಮಡದೀಗೆ॥2॥ ಚೌರಿ ರಾಗಟೆ ಗೊಂಡ್ಯ ಹೆರಳು ಬಂಗಾರ। ಬುಗುಡಿ ವಾಲೆಗಳು ಹೊಳೆಯುತಲಿ। ಸಡಗರದಿಂದಲಿ ಪುಡಿಯ ಕುಂಕುಮ ಹಚ್ಚಿ। ಒಡೆಯ ವೆಂಕೋಬನ ಮಡದೀಗೆ॥3॥

ಆರತಿಯ ಮಾಡಿರೆ ಸಾರಸಾಬ್ಜಮುಖಿ

ಆರತಿಯಾ ಮಾಡಿರೆ ಸಾರಸಾಬ್ಜಮುಖಿ ಶ್ರೀ ಲಕ್ಷ್ಮಿಗೇ॥ಪ॥ ಕಡಗ ಕಂಕಣಗಳೂ ಬೆಡಗಿನಿಂಧರಿಸುತಾ ಬಡವರ ಪೊರೆಯುವ ಮಡದೀ ಲಕ್ಷ್ಮೀಗೆ॥1॥ ದೇವರಮಾಮಣಿಗೆ ಭಾವವರಿತು ಕುಲ ಸುದತಿಯರ ಶ್ರೀರಮಣಿ ಮಣಿಗೆ॥2॥ ವಜ್ರ ಮಂಟಪದೊಳೂ ನಿದ್ರೆಯಂಗ್ಯೆಯುತ ಬಲ ಭದ್ರರ ಪಡೆಯೆಂದು ಮುದ್ದು ರುಕ್ಮಿಣೆಗೆ॥3॥ ಕುಂತಿಯ ಸೊಸೆಎನಿಸಿ ಕೌರವರೊಂಶವ ಧ್ವಂಸವಮಾಡಿದ ದ್ರೌಪದ ದೇವಿಗೆ॥4॥ ಹೀರದ ತಟ್ಟೆಯೋಳ್ ಚಾರುಮುತ್ತುಗಳಿಂದ ನೀರೆಯರ್ ಬೆರೆಸುತ ಶ್ರೀ ಲಕ್ಷ್ಮೀಗೇ॥5॥

ಆದಿಮೂರುತಿಯೆಂಬ ಅಚ್ಚ **ರಾಗ: ಕಾಂಬೋಧಿ**

ಆದಿಮೂರುತಿಯೆಂಬ ಅಚ್ಚ ಅರಿಸಿನವ ಬಳಿದು। ವೇದಮುಖಿಯೆಂಬೊ ಕುಂಕುವನಿಟ್ಟು। ಸಾದುಸಂಗಯೆಂಬೊ ಸಂಪಿಗ್ಹೂವನೆ ಮುಡಿದ ಸಂಪನ್ನ ಲಕ್ಷ್ಮಿಗೆ ಆರತಿಯೆತ್ತಿರೆ॥1॥ ಜಯ ಮಗಳಂ ನಿತ್ಯ ಶುಭಮಂಗಳಂ॥ ಕಾಮಂಧವಾನಳಿದು ಕಮಲಭಳ ತಟ್ಟೆಯಲಿ। ಶ್ರೀಮವೆಹರಿದ್ರವನೆ ಕದರಿ ಅಹಮಾ ಸೇತುವೆಯು। ಬಂದು ನೆಲೆಸಿರ್ಪ। ಆನಂದಲಕ್ಷ್ಮಿಗೆ ಆರತಿಯೆತ್ತಿರೆ॥2॥ ಜಯಮಂಗಳಂ ನಿತ್ಯ ಶುಭಮಂಗಳಂ॥ ಮಂಗಳಂ ಮಂಗಳಂ ಪರಮಮುಖಿ ಲಕ್ಷ್ಮಿ ಮಂಗಳಂ। ಮಂಗಳಂ ಪದುಮನಾಭನ ರಾಣೀಗೆ। ಮಂಗಳಂ ಮಂಗಳಂ। ನಿರುತ ಭಜಿಸುವೆ ಮಾಂಗಲ್ಯತನವೀವ ಮಹಾಲಕ್ಷ್ಮಿಗೆ॥3॥

ಇಂದು ಆರತಿ ತಂದು ಬೆಳಗಿರೆ **ರಾಗ: ಸುರುಟಿ**

ಇಂದು ಆರತಿ ತಂದು ಬೆಳಗಿರೆ। ಸಿಂಧೂರಾಜನ ಕುವರಿಗೆ । ಅರವಿಂದ ನಾಭನ ಮಡದಿಗೆ॥ಪ॥ ಅಂದು ಸುಕೃತ ಸಿಂಧು ಮೇಧನದಿ ಬಂದು ನೋಡುತ ಕೃಷ್ಣಗೆ। ವಂದಿಸುತ ಹೂ ಮಾಲೆ ಹಾಕಿದಳು। ನಂದಗೋಪನ ಕುಮಾರಗೆ॥1॥ ಎಲ್ಲ ಕಾಲದೊಳೆಲ್ಲ ದೇಶದೊಳ್ ಎಲ್ಲ ಸುರರೊಳು। ಕೃಷ್ಣಗೆ ಇಲ್ಲ ಸಮರೆಂತೆಂಬುದನು। ಜಗಕ್ಕೆಲ್ಲ ತೋರಿದ ದೇವಿಗೆ॥2॥ ಕಾಲಕಾಲಕ್ಕೆ ಚಾರುಪದ ಯುಗ ಸಾರಿ। ನಮಿಸುವ ಚರಣಕೆ। ಅಪಾರ ಸೌಖ್ಯಗಳೀವ। ಪರಾತ್ಪರ ನಾರಸಿಂಹನ ರಾಣಿಗೆ॥3॥

ಓಂ ಜಯ್ ಲಕ್ಷ್ಮೀ ಮಾತಾ (ಹಿಂದಿ) **ರಾಗ: ಕುರಂಜಿ**

ಓಂ ಜಯ್ ಲಕ್ಷ್ಮೀ ಮಾತಾ, ಜಯ್ ಲಕ್ಷ್ಮೀಮಾತಾ॥ ತುಮಕೋ ನಿಶ್ ದಿನ್ ಸೇವತ್, ಹರ್ ವಿಷ್ಣು ಧಾತಾ॥ ಜಯ್॥ ಬ್ರಹ್ಮಾಣಿ ರುದ್ರಾಣೀ। ಕಮಲಾ, ತುಮ್ ಹೀ ಜಗ್ ಮಾತಾ। ಸೂರ್ಯ್-ಚಂದ್ರಮಾ ಧ್ಯಾವತ್, ನಾರದ್ ಋಷಿ ಗಾತಾ॥1॥ ದುರ್ಗಾರೂಪ್ ನಿರಂಜನಿ, ಸುಖ-ಸಂಪತಿ ದಾತಾ। ಜೋ ಕೋಯೀ ತುಮ್ ಕೋ ಧ್ಯಾವತ್, ಋದ್ಧಿ-ಸಿದ್ಧಿ ಘನ್ ಪಾತಾ॥2॥ ತೂಹೀ ಹೈ ಪಾತಾಲ್ ಬಸಂತೀ ತೂ ಹೀ ಹೈ ಶುಭ್ ದಾತಾ। ಕರ್ಮ್-ಪ್ರಭಾವ್ -ಪ್ರಕಾಶಿನಿ ಜಗ್ ನಿಧಿ ಕೀ ತ್ರಾತಾ॥3॥ ಜಿಸ್ ಘರ್ ಥಾರೋ ಬಾಸೋ, ಜಾಂಹಿ ಮೇ ಸದ್‌ಗುಣ್ ಆತಾ। ಕರ್ ನ ಸಕೇ ಸೋಯೀ ಕರ್ ಲೇ, ಮನ್ ನಹೀಂ ಧಡ್ ಕಾತಾ॥4॥ ತುಮ್ ಬಿನ್ ಯಜ್ಞ್ ನ ಹೋವೇ। ವಸ್ತ್ರ ನ ಹೋಯ್ ರಾತಾ। ಖಾನ್-ಪಾನ್ ಕೋ ವೈಭವ್, ತುಮ್ ಬಿನ್ ಕುನ್ ದಾತಾ॥5॥ ಶುಭ್ ಗುಣ್ ಸಂದರ್ ಯುಕ್ತಾ ಕ್ಷೀರನಿಧಿ ಜಾತಾ। ರತ್ನ್ ಚತುದರ್ಶ್ ತೋಕೂಂ, ಕೋಯೀ ಭಿ ನಹೀಂ ಪಾತಾ॥6॥ ಯಾ ಆರತೀ ಲಕ್ಷ್ಮೀಜೀ ಕೀ ಜೋ ಕೋಯೀ ನರ್ ಗಾತಾ। ಉರ್ ಆನಂದ್ ಅತಿ ಉಮಂಗೇ, ಪಾಪ್ ಉತರ್ ಜಾತಾ॥7॥ ಸ್ಥಿರ್ ಚರ್ ಜಗತ್ ಬಚಾವೈ, ಕರ್ಮ್ ಪ್ರೇರಲ್ಯಾತ್। ರಾಮ ಪ್ರತಾಪ್ ಮೈಯಾ ಕಿ, ಶುಭ್ ದೃಷ್ಟಿ ಪಾತಾ॥8॥

ಕರ್ಪೂರ ಬೆಳಗುವೆನು **ರಾಗ: ಭಾಗೇಶ್ರೀ, ಖಂಡಏಕತಾಳ**

ಕರ್ಪೂರ ಬೆಳಗುವೆನು ಕಾರುಣ್ಯಮಯಿ ನಿನಗೆ। ಕುಂಕುಮಾಂಕಿತಳೆ ಕಮಲದಳ ಲೋಚನೆ॥ಪ॥ ಕಮಲದಿ ನೆಲೆಸಿರುವ ಕೋಮಲಾಂಗಿ ನಿನ್ನ। ಚರಣ ಕಮಲಕ್ಕೆ ಪರಮ ಭಕ್ತಿಯೊಳು॥1॥ ದಾಸಾನುದಾಸರನು ಪೊರೆವ ಶ್ರೀ ಹರಿವಲ್ಲಭೆ। ಶಾರದಾದಾಸಿ ವಂದಿತೆ ಜಗತ್ಪ್ರಭೆ ಕರ್ಪೂರ ಕರಗುವಂತೆ ಎನ್ನ ಕರ್ಮ ಕರಗಿಸು॥2॥

ಕರ್ಪೂರ ನೀಲಾಂಜನ ಮಿವ್ವರೆ **ರಾಗ: ಶಂಕರಾಭರಣ, ಆದಿತಾಳ**

ಕರ್ಪೂರ ನೀಲಾಂಜನ ಮಿವ್ವರೆ ಕಲಕಿ ರಂಗನಾಯಕಿಕಿ। ನೇರ್ಪಲು ಮೀರಗ ಪಾಟಲು ಪಾಡರೆ ನೀರಜ ಗುರುಶುಭದಾಯಕಿಕಿ॥ಪ॥ ಸುಂದರಾಕ್ಷಿಕಿ ಸುಂದರ ಗಾತ್ರಿಕಿ ಸುರನರ ಶಕುನಕು ಇಂದುಮುಖೀ ಕಮಲಾಕ್ಷಿನಿಕಿ।

ಮಂದಯಾನಿ ತಿರುಮಾನುನಿ ಮಾತಕು ಇಂದುತನಕು ಕೋಮಲಕಿ॥1॥ ಪಾಳಿಕೊಂಡ ತಿರುವಾಳಿ ಭಕ್ತುಲನು ಪಾಲಿಂಚದಿ ಮದಿ ದೀಕ್ಷಾವಳಿ। ಸುಲಲಿತ ರಾಮಾನುಜಾಚಾರ್ಯ ಉಳ್ಳವಾಸಿ ಕಮಲಾಕ್ಷಿನಿಕಿ॥2॥

ತಂದರಾರತಿ ಮಂದಾಕಿನೀ ಪಿತನರಸಿಗೇ **ರಾಗ: ಕಾಂಭೋದಿ**

ತಂದರಾರತಿ ಮಂದಾಕಿನೀ ಪಿತನರಸಿಗೇ ಬೇಗ। ಇಂದು ವದನೆಯರು ಚೆಂದದಿಂದಲಿ ಮಂದಗಾಮಿನಿಗೆ॥ಪ॥ ಗೋಪಾಲಕಿಯ ವೇಷವ ಧರಿಸಿ ಶ್ರೀಪತಿಗೆ ಕೋಪವ ತರಿಸಿ। ಭೂಪ ಚೋಳ ದೃಪದಗೆ ಶಾಪವ ನೇಮಿಸಿದ ಅಪಾರ ಮಹಿಮಳಿಗೆ॥1॥ ಹರಿಯ ಕೂಡ ಕಲಹದಿಂದ ಕರವೀರ ಪುರದೊಳಿರುವಂತೆ। ಪರಮ ಪಾವನೆ ಸಿರಿದೇವಿಯಳಿಗೆ ಸರಸಿಜಾಕ್ಷಿಯರು॥2॥ ಪದುಮನಯನ ವೆಂಕಟೇಶಗೆ। ಪರಿಪರಿಯಿಂದ ಬೋಧಿಸಿ। ಪದುಮಾವತಿಯಳ ಮದುವೆ ಮಾಡಿಸಿದ ಸದುಮಳಾತ್ಮಳಿಗೆ॥3॥

ನೀರಜಭವೆಗಾರುತೀಯಾ **ರಾಗ: ಕಮಾಚ್**

ನೀರಜಭವೆಗಾರುತೀಯಾ। ಸೇರಿ ಬೆಳಗಿರೇ॥ಪ॥ ಕ್ಷೀರವಾರುದೀಶ ಸುತೆಗೇ। ಸಾರಸಾಕ್ಷಿಗೇ। ನಾರದಾಭಿ ಮಾನಿಸುತೆಗೇ। ಮಾರಜನನಿಗೇ॥1॥ ಉರಗವೇಣಿ ಮಧುರವಾಣಿ ವರದ ಪಾಣಿಗೆ। ಗರುಡಗಮನನರಸಿ ದಿವ್ಯ ಕರುಣ ಜಲಧಿಗೆ॥2॥ ಅಂಗಜಾತ ಜನನಿಗೇ। ಭೃಂಗ ಕುಂತಳೇಗೇ। ಮಾಂ ಗಿರೀಶ ಹಿತೆಗೆ। ಮಂಗಳಾಂಗೆಗೇ॥3॥

ಬೆಳಗುವೆವು ಆರುತಿ ನಳಿನಾಕ್ಷಿಗೇ **ರಾಗ: ಝೇಂಕಾರಧ್ವನಿ**

ಬೆಳಗುವೆವು ಆರುತಿ ನಳಿನಾಕ್ಷಿಗೇ॥ಪ॥ ಮುತ್ತು ಮಾಣಿಕ್ಯದ ನವರತ್ನ ಕೆತ್ತಿದಾ ತಟ್ಟೆಯೊಳ್। ಮಿತ್ರೇಯರೆತ್ತಿರೇ ಮುತ್ತಿನಾರತೀ॥1॥ ಶಂಕರನರ್ಧಾಂಗಿ ಕುಂಕುಮಪಾಲೆಯೇ। ಶಂಕರೀಯ ರೆತ್ತಿರೇ ಕುಂಕುಮದಾರುತಿ॥2॥

ಬೆಳಗುವೆನಾರುತಿಯಾ ಮುದದೀ **ರಾಗ: ಬೇಗಡೆ**

ಬೆಳಗುವೆನಾರುತಿಯಾ ಮುದದೀ। ಘನ ಪೀಠದೋಳಿಹ ಸಿರಿಗೆ। ಬೆಳಗುವೆನಾರುತಿಯ ಮುದದೀ॥ಪ॥ ಮಂಗಳವಾದ್ಯದೀ। ಮೋಹನಗೀತದೀ॥ 2 ಸಾರಿ॥ ಬೆಳದಿಂಗಳ ಕಾಂತೆಗೆ, ಬೆಳಗುವೆ, ಹರಿಗುಣಗಾತ್ರೆಗೆ। ಪರಮ ಪವಿತ್ರೆಗೆ। ಹರಿಪ್ರೀತೆ ಜಗನ್ಮಾತೆ॥1॥ ರವಿ ಶಶಿಕಾಂತೆಗೆ। ಬೆಳಗುವೆ। ಘನಹರಿವಾಣದಿ ಬೆಳಗುತ ಜ್ಯೋತಿಯ॥2ಸಾರಿ॥ ನವರತ್ನದೊಳು ಪದುಮ। ಬರೆಯುತ ಗುರು ರೂಪೆಗೆ॥2॥

ಮಂಗಳಾರತಿ ಮಾಡುವೆ ಮಹಾಲಕ್ಷ್ಮಿಗೆ **ರಾಗ: ಸುರುಟಿ**

ಮಂಗಳಾರತಿ ಮಾಡುವೆ ಮಹಾಲಕ್ಷ್ಮಿಗೆ ಮಂಗಳಾರತಿ ಮಾಡುವೆ॥ಪ॥ ಮಂಗಳಾರತಿ ಮಾಡಿ ಸಂಗೀತ ಪಾಡಿ। ಶ್ರೀರಂಗನ್ನ ಸತಿಯ ಸರ್ವಾಂಗಗಳಿಗೆ ಶುಭ॥ಅ.ಪ॥ ಚಿತ್ರಗಳನೆ ಬರೆದು ರತ್ನ ತಟ್ಟೆಯಲಿ ಮುತ್ತು ಮಾಣಿಕ ತುಂಬಿ ಮುತ್ತೈದೆ ತನಗಳಕೊಟ್ಟು ರಕ್ಷಿಸು ಎಂದು ಚಿತ್ತಜನಯ್ಯನ ಮಿತ್ರೆ ಲಕ್ಷುಮಿಗೀಗ॥1॥ ಸಾಲು ದೀಪಗಳ ಹಚ್ಚಿ ಸಂತೋಷದಿಂ। ಪ್ರವಾಳ ಪಚ್ಚೆಯ ತುಂಬಿ ಬಾಲಗೋಪಾಲನ ರಾಣಿಯ ಪಾಡುತ। ನೀಲ ಕುಂತಳೆಗೀಗನೀ ರಾಜನವಿಟ್ಟು॥2॥ ಶುಕ್ರವಾರದ ದಿನದಿ ಸಕ್ಕರೆ ಕ್ಷೀರ। ಪಕ್ವಾನ್ನ ಉಣಬಡಿಸಿ। ಚೊಕ್ಕ ಚಿನ್ನದ ಹರಿವಾಣದ ಜ್ಯೋತಿ। ತ್ರಿವಿಕ್ರಮ ನಾಗೇಶ ಶಯನನುವಲ್ಲಭೆಗೆ॥3॥

ರಾರಾಜಿಸುವುದು ಲಕ್ಷ್ಮೀಗಾರತಿ **ರಾಗ: ಖಮಾಚ್**

ರಾರಾಜಿಸುವುದು ಲಕ್ಷ್ಮೀಗಾರತಿ॥ಪ॥ ಶ್ರೀನಾರಿಯರ್ ಬೆಳಗಿರೆ॥ ಸ್ವರ ಕೋಗಿಲೆ ಸ್ವರದಿಂದಲಿ ನಲಿದಾಡುತ ಜಲಕೃಷ್ಣೆಗೆ॥1॥ ಮುತ್ತು ಮಾಣಿಕ್ಯ ರತ್ನದಾರತಿ ಉತ್ತುಮಾಂಗನೆಯರು ಎರೆಚುತ॥2॥

ಕ್ಷೀರಸಾಗರ ಕನ್ಯೆಗಾರುತಿಯ — **ರಾಗ: ಸಿಂಧುಭೈರವಿ**

ಕ್ಷೀರಸಾಗರ ಕನ್ಯೆಗಾರುತಿಯ ಬಹುನೀರೆಯರೆತ್ತಿರೆ॥ಪ॥ ಶಾಮ ಸುಂದರ ಕಾಮ ಜನಕನ ಪ್ರೇಮ ಭಾಮಿನೀ ಕೋಮಲಾಂಗಿಗೆ। ತಾಮರಸಾಕ್ಷಿಗೆ ಪ್ರೇಮದಿಂದೆತ್ತಿರೆ॥1॥ ಮುತ್ತಿನಾರತಿ ಎತ್ತಿ ಪಾಡಿರೆ ಮಿತ್ರೆಯರೆಲ್ಲಾ। ಅರ್ಥಿಯಿಂದೆತ್ತಿರೆ ಮುತ್ತಿನಾರುತಿಯನು॥2॥ ಮಂಗಳಾಂಗಶ್ರೀ ರಂಗನೊಡಗೂಡಿ ರಂಗಪುರಿಯನು ಶೃಂಗರಿಸಿರೆ। ಅಂಗಜ ಮಾತೆಗೆ ಮಂಗಳವೆನ್ನಿರೆ॥3॥ ಮುತ್ತಿನಾರತಿ ಅರ್ಥಿಯಿಂದಲೆ ಪಾರ್ಥಸಾರಥಿ ಪತ್ನಿಗೆ। ಅರ್ಥಿಯಿಂದೆತ್ತಿರೆ ಶಕ್ತಿಸ್ವರೂಪಿಗೆ॥4॥

ಲಾಲಿ

ಆಡಿದಳ್ ಲಕ್ಷ್ಮಿ ಲಾಲಿ ಆಡಿದಳ್ — **ರಾಗ: ನೀಲಾಂಬರಿ**

ಆಡಿದಳ್ ಲಕ್ಷ್ಮಿ ಲಾಲಿ ಆಡಿದಳ್ ಲಕ್ಷ್ಮಿ ಶ್ರೀಲಕ್ಷ್ಮಿ ಲಾಲಿ ಆಡಿದಳ್ ಅಂಬುದಿಯೋಳ್ ಜನಿಸಿ ಅಂಬುಜಾನ ತಾನು ವರಿಸಿ। ಸಂಭ್ರಾಮಾದೊಳ್ ಮಾಲೆ ಧರಿಸಿ। ಮಾಧವಾಸಹಿತಲೀಗ॥1॥ ಕರವೀರ ಕ್ಷೇತ್ರದಲ್ಲಿ ನಿಂತು ಶರಣಾಗತರ ಸಲಹಲೆಂದು। ಸಪ್ತಪ್ರಕಾರಮಧ್ಯದೊಳ್ ನಿಂದು। ರಂಗನಾಥನ ಸಹಿತಲೀಗ॥2॥ ಸತ್ಯಭಾಮೆ ಶ್ರೀಧರನಾ ದಾನವನ್ನು ಕೊಡದಲಾಗ। ತ್ರಾಸಿನಲ್ಲಿ ತೂಗಿಸಿಕೊಂಡ ವಾಸುದೇವ ಸಹಿತಲೀಗ॥3॥ ಒದ್ದಾಜೀವಾತ್ಮರುಗಳ ಕೃಪೆಯಿಂದ ಉದ್ದರಿಸುತ। ವೃಷಬಾದ್ರಿಯೊಳುನಿಂತು ವೆಂಕಟೇಶ ಸಹಿತಲೀಗ॥4॥ ವೇದವಾಕ್ಯದಾಸುರಾನೇ ಜನಿಸಿ ವೇದವಾಕೆಂದು ಆದಿಮತ್ಸ್ಯಕೂರ್ಮರೆಂದು ನಾರಸಿಂಹ ಸಹಿತಲೀಗ॥5॥ ಕಾಂಚೀಪುರದೊಳು ನಿಂತು। ವಿರಂಚಿ ಜನಿಸಿ ವರಗಳ್ ಕೊಡುತಾ ಸಂಚಿತಾರ್ಥಕರ್ಮಕಳೆವಾ ವರದರಾಜಸಹಿತಲೀಗ॥6॥ ವಸುದೇಯ ಗರ್ಭಾದೊಳ್ ಉದಿಸಿ ದುರುಳ ಕಂಸನ ದಹಿಸಿ। ದೀನ ಜನರರಕ್ಷಿಸುವಾ ರಾಘವ ಸಹಿತಲೀಗ॥7॥ ಯಥಾವಾಕಿಲೀಲಿನಿಂತು ಎಲ್ಲರನ್ನು ಉದ್ದರಿಸುತ್ತಾ ಫುಲ್ಲನಾಭ ಚೆಲುವ ಶ್ರೀ ಕೀರ್ತಿನಾರಾಯಣ ಸಹಿತಲೀಗ॥8॥

ಮಂಗಳ

ಧರೆಯೊಳಗೆ ನಿನ್ನಂಥ ತರುಣಿ — **ರಾಗ: ಸಿಂಧೂಭೈರವಿ**

ಧರೆಯೊಳಗೆ ನಿನ್ನಂಥ ತರುಣಿ ಮಣಿಯನು ಕಾಣೆ। ಹರಿಯ ವಕ್ಷಸ್ಥಳದಿ ಇರುವೆ ನೀನು॥ ಕರವೆತ್ತಿ ಮುಗಿಯುವೆನು ಸಿರಿಯೆ। ತವ ಸೌಭಾಗ್ಯ ಎರಡು ಕಣ್ಣಿಗೆ ತೋರೆ ವರಮಹಾಲಕ್ಷ್ಮಿ॥ ಜಯ ಮಂಗಳಂ ನಿತ್ಯ ಶುಭಮಂಗಳಂ॥ಪ॥ ಜರದ ಪೀತಾಂಬರವ ಚರಣದೊಳಗಲೆಸುತಲಿ। ಸಿರಿವಂತಿ ಮೂರ್ಡೆಜ್ಜೆ ಬರುವಳಾಗಿ। ಸೆರಗೊಡ್ಡಿ ಬೇಡುವೆನು ಹೆರಳಿನಲಿ ಮುಡಿದಿರುವ। ಮರುಗ ಮಲ್ಲಿಗೆ ಚಂಪಕ ಸರಗಳನು ನೀಡೆ॥1॥ ಇಂದುಮುಖಿ ನಿನಗಾರ್ತಿ ತಂದು ನಿಂತಿಹೆ। ನೈಜ ಸುಂದರಾಮೃತ ಕೀರ್ತಿಪಾಡುತಿಹೆನು। ಇಂದಿರೇಶನ ರಾಣಿ ಹಿಂದಲೆಯೊಳಗಿರುವ। ಕುಂದದ ಕುಸುಮದ ಮಾಲೆ ತಂದು ನೀಡು ತಾಯೆ॥2॥

ಮಂಗಳಂ ಜಯಮಂಗಳಾನಂದಾ — **ರಾಗ: ಸಿಂಧೂಭೈರವಿ**

ಮಂಗಳಂ ಜಯಮಂಗಳಾ ನಂದಾ। ಮಹಲಕ್ಷ್ಮೀದೇವಿಗೆ॥ಪ॥ ಮಂಗಳೆನುತಲೆ ಕಂಗಳನು। ಬೆಳಗಿಂದಗಳಪರಿ ರಂಗುಚೆಲ್ಲುತ। ರಂಗ ಗರುಡ ತುರಂಗನೇರಿದ। ಅಂಗಜನಪಿತ ರಂಗನಿಗೆ॥1॥ ಸರ್ವಮಾಸಗಳಲ್ಲಿ ಸೊಗಸಾದ ಶ್ರಾವಣದಾ। ಮೊದಲು ಬರುವ ನಾಗರ ಪಂಚಮಿಯಿಂದ। ವರಶುಭನಕ್ಷತ್ರಬಲದಿಂದ ಸಹಿತಾಗಿಯಿಂದಾ। ತ್ವರಿತ ಗರುಡಾನ್ದೋಗಲನೇರಿ ಭರಧಿಭಕ್ತರ। ಮನೆಯಬಾಗಿಲು ತೆರೆದು ತಾನು ಹರುಷದಿಂದಲಿ। ಬರುವವರ ಶ್ರೀಹರಿಯ ರಾಣಿ॥2॥ ಸುಂದರಾಂಗಿಣಿ ಬಂದಳೆಂದರಿತು ಭಕ್ತರೆಲ್ಲಾ। ನೆರೆದು ಬಂದು ಸಂಭ್ರಮದಿಂದ ಕುಣಿಕುಣಿದೂ॥ಒಂದೆ ಮನದೊಳಗ್ವಿಮಲ ಉದುಕವ ತಂದು। ಭಕ್ತರು ಮಾಳ್ಪಪೂಜೆಗೆ। ವಂದನೆಗೆ ಬೆರಗಾಗಿ ತಾನು। ಇಂದು ವರಗಳ ಕೊಡುವೆ ದೇವಿಗೆ॥3॥ ಕರಿದ ಹೂರಣ ಕಡಬುಗಳಿಂದಾ ಪರಮಾನ್ನ ಶಾವಿಗೆ। ಸುರುಳಿಹೋಳಿಗೆ ಸಕ್ಕರೆಯಿಂದ

ಬೆರೆಸಿದ್ದ। ನಾನಾಪರಿಯಪಕ್ವಾನ್ನ ಘೃತದಿಂದಸಹಿತಾಗಿಯಿಂದಾ।। ಸರಸಿನೈವೇದ್ಯವ ಸಮರ್ಪಿಸಿ। ಹರುಷ ದಿಂದ್ವೊರಗಳನೆ ಕೊಡುವೋ ಸರಸಿ। ತಿರುಪತಿಯ ವೆಂಕಟನರಸಿ ಲಕ್ಷ್ಮೀ ಸರಸಿಜಾಕ್ಷಿಗೇ।।4।।

ಮಂಗಳಂ ವೀರಲಕ್ಷ್ಮಿ ಮಂಗಳಂ **ರಾಗ:ರಂಜನಿ**

ಮಂಗಳಂ ವೀರಲಕ್ಷ್ಮಿ ಮಂಗಳಂ। ವಿಜಯಲಕ್ಷ್ಮಿ ಮಂಗಳಂ।। ವಿಶ್ವಜನನಿ ಮಂಗಳಂ। ಲಕ್ಷ್ಮೀದೇವಿ ಮಂಗಳಂ ।।ಪ।। ಸಿಂಧಾರಾಜ ನಂದನೇ। ಸಾಕ್ಷಿನಿದನಿ ರಂಜನೇ। ಶಕ್ತಿ ಸುಗುಣ ಭಂಜನೇ। ಭಕ್ತಜನಾರ್ತಿ ರಂಜನೇ।।1।। ಆದಿ ಮೂಲ ಕಾರಿಣಿ। ಅಮೃತ ಕಲಶ ಧಾರಿಣಿ। ಆನಂದ ಪೂರಿನಿ। ಅಮ್ರವಿಶ್ವ ನೋದಿನಿ।।2।। ಶಂಖುಚಕ್ರ ಶೋಭಿತೆ। ಸುವರ್ಣ ಭರಣ ಭೂಷಿತೇ। ಶಾಂತಿಸುಖಲಾಲಿತೇ। ಸನಕಾದಿ ಮುನಿನುತೆ।।3।। ಪಾಲತಿಲಕ ಶೋಭಿತೆ। ಪದ್ಮ ಕರವಿ ರಾಜಿತೇ। ಪಾಲಿಸೇ ಫಲಪ್ರದಾತೇ। ಪದ್ಮ ಸಂಭವನಮಾತೆ।।4।।

ಮಂಗಳಂ ಶ್ರೀ ರಂಗನಾಯಕೀ **ರಾಗ: ಸುರಟಿ**

ಮಂಗಳಂ ಶ್ರೀ ರಂಗನಾಯಕೀ। ಭಾಗ್ಯಲಕ್ಷ್ಮಿ ಮಂಗಳಂ। ಶ್ರೀ ಮೋಕ್ಷದಾಯಕಿ ಮಂಗಳಂ। ಶ್ರೀ ಮಹಾನುಭಾವೆ ಅರಸಿ ಲಕ್ಷ್ಮಿ ಲೋಕಮಾತೆ ನಂಬಿದೇ ಎನ್ನಸೌ। ಮಾಂಗಲ್ಯತನವ ಪಾಲಿಸೆ।।ಪ।। ಕ್ಷೀರಸಾಗರನ ಬಣ್ಣಿಸಿ। ನಿನ್ನ ಭಜಿಪೆ ಎನ್ನ ಸಲಹೆ ಮೋಕ್ಷದಾಯಕಿ। ಮೂರುಲೋಕಲ್ಲಿಕಾಣೆ ತಾಯೆ ಸೊಬಗ ನಾನು। ಬೇಡಿದವರಿಗ್ವರವಕೊಡುವೊ। ಭಕ್ತ ಪ್ರದಾಯಕಿಗೆ।।1।। ಜರಿಯುನೀ ರಾಜಸೀರೆಯು। ಉಡಿಸಿ ಕೈಗೆ ತೊಡಿಸಿ ದಾಭರಣರವಿಕೆಯ। ನಡುವಿನೊಡ್ಯಾಣ ವಂಕಿ। ಬುಗುಡಿ ಬಾವುಲಿಗಳ। ಧರಿಸಿ ಕೊರಳೊಳ್। ಸರ ಕಂಠಮಾಲೆ ಪದತಲತಲಿಪಳೂ।।2।। ಚಂದ್ರ ಸೂರ್ಯರ ಜರಿಯುವೋ ಮುಖಕೆ ದಿವ್ಯ ಚಂದ್ರದಾಕಾರ ತಿಲಕವಾ। ಶ್ರೀರಂಗನಾಥ ಅಂಗನೇಗೆ ಚಂದದಾಭರಣ ಧರಿಸಿ। ನಂಬಿದವರಿಗೆ ವರವ ಕೊಡುವ। ಶ್ರೀರಂಗನಾಥನಂಗನೇಗೆ।।3।।

ದೇವಿ ಸ್ತುತಿ

ದೇವರನಾಮ

ಉಮಾ ಕಾತ್ಯಾಯಿನಿ ಗೌರಿ **ರಾಗ:ಆನಂದಭೈರವಿ**

ಉಮಾ ಕಾತ್ಯಾಯಿನಿ ಗೌರಿ। ದಾಕ್ಷಾಯಿಣಿ ಹಿಮವಂತ ಗಿರಿಯ ಕುಮಾರಿ.......।।ಪ।। ರಮೆಯರಸನ ಪದಕಮಲ ಮಧುಪೆ ನಿತ್ಯ ಅಮರವಂದಿತೆ ಗಜಗಮನೆ ಭವಾನಿ।।ಅ.ಪ।। ಪನ್ನಗಧರನ ರಾಣಿ ಪರಮ ಪಾವನಿ। ಪುಣ್ಯಫಲ ಪ್ರದಾಯಿನಿ। ಪನ್ನಂಗವೇಣಿ ಶರ್ವಾಣಿ। ಕೋಕಿಲ ವಾಣಿ। ಉನ್ನತ ಗುಣಗಣಶ್ರೇಣೀ। ಎನ್ನಮನದ ಅಭಿಮಾನಿ ದೇವತೆಯೆ ಸ್ವರ್ಣಗಿರಿಸಂಪನ್ನೆ ಭಾಗ್ಯನಿಧಿ। ನಿನ್ನ ಮಹಿಮೆಯನು ಬಿನ್ನಾಣದಲಿ ನಾ ವರ್ಣಿಸಲಳವೆ ಪ್ರಸನ್ನವದನಳೆ।।1।। ಮುತ್ತಿನ ಪದಕಹಾರ। ಮೋಹನ್ನಸರ। ಉತ್ತುಂಮಾಂಗದ ಅಲಂಕಾರ। ಜತ್ಯಾಗಿ ಇಟ್ಟ ಪಂಜರದೋಲೆ। ವೈಯ್ಯಾರ ರತ್ನ ಕಂಕಣದ ಉಂಗುರ। ತೆತ್ತಿ ಸಕೋಟಿ ದೇವತೆಗಳು ಪೊಗಳುತಾ ಸತಿಗೆ ಚಾಮರವೆತ್ತಿ ಪಿಡಿಯುತಿರೆ। ಸುತ್ತಲೂ ಆಡುವ ನರ್ತನ ಸಂದಣಿ ಎತ್ತ ನೋಡಿದರತ್ತ ಥೈ ಥೈ ವಾದ್ಯ।।2।। ಪೊಳೆವ ವಸನ ಕಂಚುಕ....ಕಸ್ತೂರಿ ತಿಲಕ। ಥಳಿಪ ಮೂಗುತಿ ನಾಸಿಕ...। ತಳಿತ ಮಲ್ಲಿಗೆ ಗಂಧಿಕ...। ಮುಡಿದ ಸೂಸುತ ಸಲೆ ಭುಜಕೀರ್ತಿ ಪಾಟಿಕವ। ಇಳೆಯೊಳು ಮಧುರಾಪುರದೊಳುವಾಸಳೆ। ಅಳಗಿರಿ ವಿಜಯ ವಿಠಲನ ಕೊಂಡಾಡುವ। ಸುಲಭ ಜನರಿಗೆಲ್ಲಾ ಒಲಿದು ಮತಿಯನೀವೆ ಗಿಳಿಕರಶೋಭಿತೆ ಪರಮ ಮಂಗಳೆ।।3।।

ಕಾಳಿಕಾಂಬ ಜಗಜ್ಜನನಿ **ರಾಗ: ಬೇಹಾಗ್**

ಕಾಳಿಕಾಂಬ ಜಗಜ್ಜನನಿ ಲೋಕಪೂಜ್ಯ ಪಾವನಿ। ಮೋದದಿಂದ ಹರಸುತಾಯೆ ಸುತರಕಾಯೆ ಕಣ್ಮಣಿ।।ಪ।। ಸುರರು